ಶ್ರೀರಾಮಕೃಷ್ಣಾಶ್ರಮ
ಮೈಸೂರು

ಕೇನೋಪನಿಷತ್

ಮೂಲ ಪ್ರತಿಪದಾರ್ಥ
ತಾತ್ಪರ್ಯ ಟಿಪ್ಪಣಿಗಳೊಡನೆ

ಸ್ವಾಮಿ ಆದಿದೇವಾನಂದ

ಶ್ರೀರಾಮಕೃಷ್ಣಾಶ್ರಮ
ಮೈಸೂರು

ಪ್ರಕಾಶಕರು
ಅಧ್ಯಕ್ಷರು
ಶ್ರೀರಾಮಕೃಷ್ಣಾಶ್ರಮ
ಮೈಸೂರು

ಮೊದಲನೆಯ ಪ್ರಕಾಶನ ೧೯೫೭

ಮುದ್ರಕರು
ಶಾರದಾ ಛಾಪಖಾನೆ
ಮಂಗಳೂರು–೧

ಪ್ರಸ್ತಾವನೆ

'ಕೇನೋಪನಿಷತ್' ಎಂಬ ಹೆಸರಿನಿಂದ ಪ್ರಸಿದ್ಧವಾದ ತಲವಕಾರೋಪನಿಷತ್ ಸಾಮವೇದದ ತಲವಕಾರಬ್ರಾಹ್ಮಣಕ್ಕೆ ಸೇರಿದ್ದು. ತಲವಕಾರಕ್ಕೆ ಜೈಮಿನೀಯಬ್ರಾಹ್ಮಣವೆಂಬ ಹೆಸರೂ ಉಂಟು. ಈ ಉಪನಿಷತ್ತಿನ ಮೊದಲನೆಯ ಮಂತ್ರವು 'ಕೇನ' ಎಂಬ ಪದದಿಂದ ಪ್ರಾರಂಭವಾಗುವುದರಿಂದ ಇದಕ್ಕೆ 'ಕೇನೋಪನಿಷತ್' ಎಂಬ ಹೆಸರು ಬಂದಿದೆ. ಶ್ರೀಶಂಕರಾಚಾರ್ಯರು ತಮ್ಮ ಅವತರಣಿಕೆಯಲ್ಲಿ ಈ ಉಪನಿಷತ್ (ತಲವಕಾರಬ್ರಾಹ್ಮಣದ) ಒಂಬತ್ತನೆಯ ಅಧ್ಯಾಯವಾಗಿದೆಯೆಂದು ಹೇಳಿರುತ್ತಾರೆ. ಡಾ. ಬರ್ನೆಲ್ (Dr. A. C. Burnell) ಮತ್ತು ಡಾ. ಹ್ಯಾನ್ಸ್ ಓರ್ಟೆಲ್ (Dr. Hans Oertel) ಇವರ ಮತದ ಪ್ರಕಾರ ಈ ಉಪನಿಷತ್ ಜೈಮಿನೀಯಬ್ರಾಹ್ಮಣದ ನಾಲ್ಕನೆಯ ಅಧ್ಯಾಯದ ಹತ್ತನೆಯ ಅನುವಾಕವಾಗಿರುತ್ತದೆ. ಸಾಂಪ್ರದಾಯಿಕವಾಗಿ ಇದು ಈಶೋಪನಿಷತ್ ಆದ ಮೇಲೆ ಬಂದರೂ ವಿಂಟರ್ನಿಟ್ಸ್, ಗೆಡೆನ್ (A. S. Geden) ಮೊದಲಾದ ಪಾಶ್ಚಾತ್ಯ ಪಂಡಿತರ ಅಭಿಪ್ರಾಯದ ಪ್ರಕಾರ ಇದು ಈಶೋಪನಿಷತ್ತಿಗಿಂತಲೂ ಪ್ರಾಚೀನವಾದದ್ದು, ಹಳೆಯ ಗದ್ಯಪದ್ಯದ ರೂಪದಲ್ಲಿರುವ ಬೃಹದಾರಣ್ಯಕ, ಛಾಂದೋಗ್ಯ, ತೈತ್ತಿರೀಯ, ಐತರೇಯ, ಕೌಷೀತಕಿ ಈ ಉಪನಿಷತ್ತುಗಳ ಗುಂಪಿಗೆ ಸೇರಿದೆ.

ಈ ಉಪನಿಷತ್ತಿಗೆ ಶ್ರೀಶಂಕರಾಚಾರ್ಯರದೆಂದು ಪ್ರಸಿದ್ಧವಾದ ಎರಡು ಭಾಷ್ಯಗಳಿರುತ್ತವೆ: ಒಂದಕ್ಕೆ ಪದಭಾಷ್ಯವೆಂದೂ ಇನ್ನೊಂದಕ್ಕೆ ವಾಕ್ಯಭಾಷ್ಯವೆಂದೂ ಹೆಸರುಂಟು. ವಾಕ್ಯಭಾಷ್ಯವು ಪದಭಾಷ್ಯಕಾರರದೇ ಎಂದು ಖಂಡಿತವಾಗಿ ನಿಷ್ಕರ್ಷಿಸಿ ಹೇಳಲು ಕೆಲವು ಆಕ್ಷೇಪಣೆಗಳುಂಟು. ಈ ಪುಸ್ತಕದ ಮೊದಲನೆಯ ಭಾಗದಲ್ಲಿ ಮೂಲದೊಂದಿಗೆ ಪದಭಾಷ್ಯಾನುಸಾರವಾಗಿ ಪ್ರತಿಪದಾರ್ಥ-ತಾತ್ಪರ್ಯ-ಟಿಪ್ಪಣಿಗಳನ್ನು ಕೊಟ್ಟು, ಎರಡನೆಯ ಭಾಗದಲ್ಲಿ ಶ್ರೀರಂಗರಾಮಾನುಜಯತಿಗಳ ವ್ಯಾಖ್ಯಾನುಸಾರವಾಗಿ ತಾತ್ಪರ್ಯ-ಟಿಪ್ಪಣಿಗಳನ್ನು ಕೊಟ್ಟಿದೆ.

ಶ್ರೀವೇದಾಂತದೇಶಿಕರು ಈಶೋಪನಿಷತ್ತಿಗೆ ಮಾತ್ರ ಭಾಷ್ಯವನ್ನು ಬರೆದಿದ್ದಾರೆ. ರಂಗರಾಮಾನುಜರು ಹಲವು ಪ್ರಧಾನವಾದ ಉಪನಿಷತ್ತು

ಗಳಿಗೆ ವಿಶಿಷ್ಟಾದ್ವೈತಸಂಪ್ರದಾಯರೀತ್ಯಾ ವ್ಯಾಖ್ಯಾನವನ್ನು ಬರೆದಿರುತ್ತಾರೆ. ಇವರು ಹದಿನಾರನೆಯ ಶತಮಾನದಲ್ಲಿ ವೇಲಾಮೂರು ಗ್ರಾಮದಲ್ಲಿ ಜನಿಸಿ ದೊಡ್ಡಯ್ಯಾಚಾರ್ಯರ ಮತ್ತು ಅಪ್ಪಯ್ಯದೀಕ್ಷಿತರ ಕಿರಿಯ ಸಮಕಾಲೀನ ರಾಗಿದ್ದರೆಂದು ಕಂಡುಬರುತ್ತದೆ.

ನಾಲ್ಕು ಖಂಡಗಳನ್ನು ಒಳಗೊಂಡಿರುವ ಈ ಉಪನಿಷತ್, ಶ್ರೀಶಂಕ ರಾಚಾರ್ಯರು ತಮ್ಮ ಭಾಷ್ಯಾವತರಣಿಕೆಯಲ್ಲಿ ಹೇಳುವಂತೆ, ಪರಬ್ರಹ್ಮ ವಿಷಯವಾದದ್ದು. ಪರಬ್ರಹ್ಮವು ಅತೀಂದ್ರಿಯವಸ್ತುವೆಂದೂ, ಜಡವಾದ ಇಂದ್ರಿಯಗಳ ಚೇತನತ್ವವು ಅದರಿಂದಲೇ ಉಂಟಾಗಿದೆಯೆಂದೂ, ಅದರ ಸ್ವರೂಪವನ್ನು ಪ್ರಮಾಣಗಳಿಂದ ಇತರರಿಗೆ ಉಪದೇಶಿಸುವುದು ಅಸಾಧ್ಯ ವೆಂದೂ ಮೊದಲನೆಯ ಖಂಡವು ತಿಳಿಸುತ್ತದೆ. 'ಬ್ರಹ್ಮವನ್ನು ಹೇಗೆ ಅರಿಯ ಬಹುದು?' ಎಂಬುದಕ್ಕೆ ಎರಡನೆಯ ಖಂಡವು ಉತ್ತರವನ್ನು ಕೊಡುತ್ತದೆ: 'ತಿಳಿದುಕೊಂಡಿಲ್ಲವೆಂದೂ ಎಣಿಸಿರುವುದಿಲ್ಲ, ತಿಳಿದೂ ಇರುತ್ತೇನೆ' ಎಂಬ ಜ್ಞಾನವು ಯಾವನಿಗೆ ಇರುತ್ತದೆಯೊ ಅವನೇ ತಿಳಿದಿರುತ್ತಾನೆ. ಬ್ರಹ್ಮವು ಇಂದ್ರಿಯಗಳಿಗೆ ವಿಷಯವಾಗದಿದ್ದರೂ ಪ್ರತ್ಯಗಾತ್ಮನೆಂದು ಅರಿಯಬಹುದು. ಆದರೆ 'ಚೆನ್ನಾಗಿ ಅರಿತಿದ್ದೇನೆ' ಎಂದು ಹೇಳಲಾಗುವುದಿಲ್ಲ. ಮೂರನೆಯ ಖಂಡದಲ್ಲಿ ಒಂದು ಆಖ್ಯಾಯಿಕೆಯು ಬರುತ್ತದೆ. ದೇವತೆಗಳ ಗರ್ವಭಂಗಕ್ಕಾಗಿ ಬ್ರಹ್ಮವು ಯಕ್ಷರೂಪದಿಂದ ಅಗ್ನಿವಾಯುಗಳಿಗೆ ಕಾಣಿಸಿಕೊಳ್ಳಲು ಅವರಿಗೆ ಅದೇನೆಂದು ತಿಳಿಯಲಿಲ್ಲ. ಇಂದ್ರನಿಗೆ ಮಾತ್ರ ಉಮಾ-ಹೈಮವತಿಯ ದರ್ಶನ ವಾದ ಮೇಲೆ ಅದು ಬ್ರಹ್ಮವೆಂದು ತಿಳಿಯಿತು. ಬ್ರಹ್ಮವಿದ್ಯೆಯ ಸ್ತುತಿ ಗಾಗಿಯೂ, ಬ್ರಹ್ಮದ ಅಸ್ತಿತ್ವವನ್ನು ಪ್ರತಿಪಾದಿಸುವುದಕ್ಕಾಗಿಯೂ ಈ ಆಖ್ಯಾಯಿಕೆಯನ್ನು ಹೇಳಿದೆ. ಈ ದೃಷ್ಟಿಯಿಂದ ಈ ಖಂಡಕ್ಕೂ ಮುಂದಿನ ಖಂಡಕ್ಕೂ ಸಂಬಂಧವುಂಟು. ನಾಲ್ಕನೆಯ ಖಂಡವು ಅತ್ಯಂತ ಮುಖ್ಯವೆಂದು ಹೇಳಬಹುದು. ಉಮಾ-ಹೈಮವತಿಯು ಉಪಮಾನಗಳ ಮೂಲಕ ಬ್ರಹ್ಮ ವಿದ್ಯೆಯನ್ನು ಇಂದ್ರನಿಗೆ ಉಪದೇಶಿಸುತ್ತಾಳೆ. ಬ್ರಹ್ಮವು ಮಿಂಚಿನ ಬಳ್ಳಿಯಂತೆ ಹೊಳೆದು ಮಾಯವಾಗುತ್ತದೆ. ಬೃಹದಾರಣ್ಯಕೋಪನಿಷತ್ತಿನಲ್ಲಿ (೨, ೩, ೬) ಬ್ರಹ್ಮದ ರೂಪವು 'ಸಕೃದ್ವಿದ್ಯುತ್ತಂ' ಎಂದು ಹೇಳಿದೆ. ಮುಂದಿನ ಮಂತ್ರ ದಲ್ಲಿರುವ 'ಮಾನಸಿಕ' ಉಪಮಾನವು ದುರ್ವಿಜ್ಞೇಯವಾಗಿರುತ್ತದೆ. ಪ್ರಾಚ್ಯ

ಭಾಷ್ಯಕಾರರು ಮತ್ತು ಪಾಶ್ಚಾತ್ಯ ಅನುವಾದಕರು ಇದಕ್ಕೆ ನಾನಾವಿಧವಾಗಿ ಅರ್ಥವನ್ನು ಕಲ್ಪಿಸಿರುತ್ತಾರೆ. ಬ್ರಹ್ಮವು ಮನಸ್ಸಿನ ಪ್ರತ್ಯಯಗಳೊಂದಿಗೆ ತೋರಿಸಿಕೊಳ್ಳುವ ಸ್ವಭಾವವುಳ್ಳದೆಂದು ಶ್ರೀಶಂಕರಾಚಾರ್ಯರು ಹೇಳಿರುತ್ತಾರೆ. ಮನಸ್ಸಿನಿಂದ ಬ್ರಹ್ಮವನ್ನು ವಿಷಯೀಕರಿಸಲು ಸಾಧ್ಯವಲ್ಲವೆಂದು ರಂಗರಾಮಾನುಜರ ಮತ. ಮನಸ್ಸು ವಿಷಯಗಳ ಕಡೆಗೆ ಹೋಗುವುದರಿಂದಲೂ, ನಮ್ಮಲ್ಲಿರುವ ಯಾವುದೊ ಒಂದು ವಸ್ತುವು ವಿಷಯಗಳನ್ನು ಅರಿಯುವುದರಿಂದಲೂ ಮತ್ತು ಪ್ರತ್ಯಯಗಳನ್ನು ಒಟ್ಟುಗೂಡಿಸಿ ಸ್ಮರಿಸುವುದರಿಂದಲೂ ಬ್ರಹ್ಮದ ಅಸ್ತಿತ್ವವು ಸಿದ್ಧವಾಯಿತೆಂದು ಮ್ಯಾಕ್ಸ್ ಮುಲ್ಲರ್ ಹೇಳಿರುತ್ತಾರೆ. ಏನೇ ಆಗಲಿ ಮನಸ್ಸು ಬ್ರಹ್ಮದ ಬಳಿಗೆ ಹೋಗುತ್ತದೆಂಬುದು ಸ್ಪಷ್ಟವಾಗಿದೆ. ಕೊನೆಗೆ ಬ್ರಹ್ಮವನ್ನು 'ತದ್ವನ' ಅಥವಾ 'ವನ' ಎಂದು ಉಪಾಸಿಸಬೇಕೆಂದು ಹೇಳಿದೆ. ಎಲ್ಲರೂ ಪ್ರತ್ಯಗಾತ್ಮವಾದ ಬ್ರಹ್ಮವನ್ನು ಪ್ರೀತಿಸುವುದರಿಂದ, ಬಯಸುವುದರಿಂದ, ಅದಕ್ಕೆ ಈ ಹೆಸರು ಬಂದಿದೆ. ಈ ಉಪಾಸನೆಯೇ ಕೇನೋಪನಿಷತ್ತಿನ ಪರಮರಹಸ್ಯವೆಂದು ಹೇಳಬಹುದು. ಛಾಂದೋಗ್ಯೋಪನಿಷತ್ತಿನಲ್ಲಿ (೩, ೧೪, ೧) ಬ್ರಹ್ಮವನ್ನು 'ತಜ್ಜಲಾನ್' ಎಂದು ಕರೆದಿರುವುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬೇಕು.

ನಮ್ಮ ಇಂದ್ರಿಯಗಳಿಗೆ ವಿಷಯಗಳನ್ನು ಪ್ರಕಾಶಗೊಳಿಸುವ ಸಾಮರ್ಥ್ಯ ಆತ್ಮಜ್ಯೋತಿಯಿಂದಲೇ ಆಗಿದೆ; ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿಸಿಕೊಡಲಾಗದ ಬ್ರಹ್ಮವನ್ನು ಆಗಮದಿಂದ ತಿಳಿಯಬಹುದು; ಬ್ರಹ್ಮವು ನಮ್ಮ ಪ್ರತ್ಯಗಾತ್ಮವಾದುದರಿಂದ ಅದನ್ನು 'ತದ್ವನ' ಎಂದು ಉಪಾಸಿಸತಕ್ಕದ್ದು; ತಪೋದಮಕರ್ಮಗಳು ಅದಕ್ಕೆ ಪ್ರತಿಷ್ಠೆ; ಇದು ಈ ಉಪನಿಷತ್ತಿನ ಸಾರಾಂಶ.

ಶ್ರೀರಾಮಕೃಷ್ಣಾಶ್ರಮ
ಮಂಗಳೂರು

ಸ್ವಾಮಿ ಆದಿದೇವಾನಂದ

ಕೇನೋಪನಿಷತ್

(ತಲವಕಾರೋಪನಿಷತ್)

ಶಾಂತಿಪಾಠ

ಹರಿಃ ಓಮ್

ಸಹ ನಾವವತು ಸಹ ನೌ ಭುನಕ್ತು ಸಹ ವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ ॥

ಓಂ ಶಾಂತಿಃ ಶಾಂತಿಃ ಶಾಂತಿಃ

ನೌ=ನಮ್ಮಿಬ್ಬರನ್ನೂ ಸಹ=ಜೊತೆಯಲ್ಲಿ ಅವತು=ಕಾಪಾಡಲಿ; ನೌ=ನಮ್ಮಿಬ್ಬರನ್ನೂ ಸಹ=ಜೊತೆಯಲ್ಲಿ ಭುನಕ್ತು=ಪೋಷಿಸಲಿ; ಸಹ=ಜೊತೆಯಲ್ಲಿ ವೀರ್ಯಂ=ಸಾಮರ್ಥ್ಯವನ್ನು ಕರವಾವಹೈ=ಉಂಟುಮಾಡುವಂತಾಗಲಿ; ನೌ=ನಮ್ಮಿಬ್ಬರ ಅಧೀತಂ=ಅಧ್ಯಯನವು ತೇಜಸ್ವಿ ಅಸ್ತು=ತೇಜಸ್ವಿಯಾಗಲಿ; ಮಾ ವಿದ್ವಿಷಾವಹೈ=ದ್ವೇಷಮಾಡದೆ ಇರುವಂತಾಗಲಿ.

ಹರಿಃ ಓಮ್

(ಪರಮೇಶ್ವರನು) ನಮ್ಮಿಬ್ಬರನ್ನೂ ಜೊತೆಯಲ್ಲಿ ಕಾಪಾಡಲಿ; ನಮ್ಮಿಬ್ಬರನ್ನೂ ಜೊತೆಯಲ್ಲಿ ಪೋಷಿಸಲಿ; (ನಾವು) ಜೊತೆಯಲ್ಲಿ ಸಾಮರ್ಥ್ಯವನ್ನು ಉಂಟುಮಾಡುವಂತಾಗಲಿ; ನಮ್ಮಿಬ್ಬರ ಅಧ್ಯಯನವು ತೇಜಸ್ವಿಯಾಗಲಿ; (ನಾವು ಪರಸ್ಪರ) ದ್ವೇಷಮಾಡದೆ ಇರುವಂತಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಆಪ್ಯಾಯಂತು ಮಮಾಂಗಾನಿ ವಾಕ್ ಪ್ರಾಣಶ್ಚಕ್ಷುಃ
ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ಸರ್ವಾಣಿ
ಸರ್ವಂ ಬ್ರಹ್ಮೋಪನಿಷದಂ ಮಾಹಂ ಬ್ರಹ್ಮ ನಿರಾಕುರ್ಯಾಂ
ಮಾ ಮಾ ಬ್ರಹ್ಮ ನಿರಾಕರೋದನಿರಾಕರಣಮಸ್ತ್ವನಿರಾಕರಣಂ
ಮೇಽಸ್ತು ತದಾತ್ಮನಿ ನಿರತೇ ಯ ಉಪನಿಷತ್ಸು
ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು ॥

ಓಂ ಶಾಂತಿಃ ಶಾಂತಿಃ ಶಾಂತಿಃ

ಮಮ=ನನ್ನ **ಅಂಗಾನಿ**=ಅವಯುವಗಳು **ಅಥೋ**=ಮತ್ತು **ವಾಕ್**=ಮಾತು **ಪ್ರಾಣಃ**=ಪ್ರಾಣ **ಚಕ್ಷುಃ**=ಕಣ್ಣು **ಶ್ರೋತ್ರಂ**=ಕಿವಿ **ಬಲಂ**=ಬಲ **ಚ**=ಮತ್ತು **ಸರ್ವಾಣಿ**=ಎಲ್ಲ **ಇಂದ್ರಿಯಾಣಿ**=ಇಂದ್ರಿಯುಗಳು **ಆಪ್ಯಾಯಂತು**=ಪುಷ್ಟಿಯುನ್ನು ಹೊಂದಲಿ; **ಸರ್ವಂ**=ಎಲ್ಲವೂ **ಉಪನಿಷದಂ**=ಉಪನಿಷತ್ತಿನ **ಬ್ರಹ್ಮ**=ಬ್ರಹ್ಮವೇ; **ಅಹಂ**=ನಾನು **ಬ್ರಹ್ಮ**=ಬ್ರಹ್ಮವನ್ನು **ಮಾ ನಿರಾಕುರ್ಯಾಂ**=ನಿರಾಕರಿಸದಂತಿರಲಿ; **ಬ್ರಹ್ಮ**=ಬ್ರಹ್ಮವು **ಮಾ**=ನನ್ನನ್ನು **ಮಾ ನಿರಾಕರೋತ್**=ನಿರಾಕರಿಸದಂತಿರಲಿ; **ಅನಿರಾಕರಣಂ**=ಅನಿರಾಕರಣವು **ಅಸ್ತು**=ಇರಲಿ; **ಮೇ**=ನನ್ನ ಎಂದರೆ ನನ್ನಿಂದ **ಅನಿರಾಕರಣಂ**=ಅನಿರಾಕರಣವು **ಅಸ್ತು**=ಇರಲಿ; **ಉಪನಿಷತ್ಸು**=ಉಪನಿಷತ್ತುಗಳಲ್ಲಿ **ಯೇ ಧರ್ಮಾಃ [ಸಂತಿ]**=ಯಾವ ಧರ್ಮಗಳು ಉಕ್ತವಾಗಿವೆಯೋ **ತೇ**=ಅವು **ತದಾತ್ಮನಿ**=ಆ ಆತ್ಮನಲ್ಲಿ **ನಿರತೇ ಮಯಿ**=ನಿರತನಾದ ನನ್ನಲ್ಲಿ **ಸಂತು**=ನೆಲಸಿರಲಿ; **ತೇ ಮಯಿ ಸಂತು**=ಅವು ನನ್ನಲ್ಲಿ ನೆಲಸಿರಲಿ.

ನನ್ನ ಅವಯುವಗಳೂ ಮಾತೂ ಪ್ರಾಣವೂ ಕಣ್ಣುಕಿವಿಗಳೂ ಬಲವೂ ಮತ್ತು ಎಲ್ಲ ಇಂದ್ರಿಯಗಳೂ ಪುಷ್ಟಿಯನ್ನು ಹೊಂದಲಿ; ಎಲ್ಲವೂ ಉಪನಿಷತ್ತುಗಳಲ್ಲಿ ಉಕ್ತವಾಗಿರುವ ಬ್ರಹ್ಮವೇ; ನಾನು ಬ್ರಹ್ಮವನ್ನು ನಿರಾಕರಿಸದಂತಿರಲಿ; ಬ್ರಹ್ಮವು ನನ್ನನ್ನು ನಿರಾಕರಿಸದಂತಿರಲಿ; ನಿರಾಕರಣವೆಂಬುದೇ ಇಲ್ಲದಿರಲಿ; ನನ್ನಿಂದಾದರೂ ನಿರಾಕರಣೆಯಿಲ್ಲದಿರಲಿ; ಉಪನಿಷತ್ತುಗಳಲ್ಲಿ ಉಕ್ತವಾಗಿರುವ ಧರ್ಮಗಳು ಆತ್ಮನಿರತನಾದ ನನ್ನಲ್ಲಿ ನೆಲಸಿರಲಿ; ಅವು ನನ್ನಲ್ಲಿ ನೆಲಸಿರಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಕೇನೋಪನಿಷತ್

ಮೊದಲನೆಯ ಖಂಡ

ಕೇನೇಷಿತಂ ಪತತಿ ಪ್ರೇಷಿತಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿ ಯುಕ್ತಃ ।
ಕೇನೇಷಿತಾಂ ವಾಚಮಿಮಾಂ ವದಂತಿ
ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ ॥ ೧ ॥

ಕೇನ ಇಷಿತಂ [ಸತ್]=ಯಾರ ಇಷ್ಟದಂತೆ **ಪ್ರೇಷಿತಂ**=ಪ್ರೇರಿತವಾಗಿ **ಮನಃ**=ಮನಸ್ಸು [**ಸ್ವವಿಷಯಂ ಪ್ರತಿ**=ತನ್ನ ವಿಷಯದ ಕಡೆಗೆ] **ಪತತಿ**=ಹೋಗುತ್ತದೆ? **ಕೇನ**=ಯಾರಿಂದ **ಯುಕ್ತಃ**=ಪ್ರೇರಿತವಾಗಿ **ಪ್ರಥಮಃ**=ಪ್ರಥಮ **ಪ್ರಾಣಃ**=ಪ್ರಾಣವು [**ಸ್ವವ್ಯಾಪಾರಂ ಪ್ರತಿ**=ತನ್ನ ಕೆಲಸದಲ್ಲಿ] **ಪ್ರೈತಿ**=ತೊಡಗುತ್ತದೆ? **ಕೇನ ಇಷಿತಾಂ**=ಯಾರ ಇಷ್ಟದಂತೆ **ಇಮಾಂ**=ಈ **ವಾಚಂ**=ಮಾತನ್ನು **ವದಂತಿ**=ಆಡುತ್ತಾರೆ? **ಕಃ ಉ ದೇವಃ**=ಯಾವ ದೇವನು **ಚಕ್ಷುಃ**=ಕಣ್ಣನ್ನು **ಶ್ರೋತ್ರಂ**=ಕಿವಿಯನ್ನು [**ಸ್ವೇ ಸ್ವೇ ವಿಷಯೇ**=ತನ್ನ ತನ್ನ ವಿಷಯದಲ್ಲಿ] **ಯುನಕ್ತಿ**=ಪ್ರೇರಿಸುತ್ತಾನೆ?

೧. ಯಾರ ಇಷ್ಟದಂತೆ ಪ್ರೇರಿತವಾಗಿ ಮನಸ್ಸು (ತನ್ನ ವಿಷಯದ ಕಡೆಗೆ) ಹೋಗುತ್ತದೆ? ಯಾರಿಂದ ಪ್ರೇರಿತವಾಗಿ ಪ್ರಥಮ ಪ್ರಾಣವು (ತನ್ನ ಕಾರ್ಯದಲ್ಲಿ) ತೊಡಗುತ್ತದೆ? ಯಾರ ಇಷ್ಟದಂತೆ ಈ ಮಾತನ್ನು ಜನರು ಆಡುತ್ತಾರೆ? ಯಾವ ದೇವನು ಕಣ್ಣುಕಿವಿಗಳನ್ನು (ತಮ್ಮ ತಮ್ಮ ವಿಷಯಗಳಲ್ಲಿ) ಪ್ರೇರಿಸುತ್ತಾನೆ?

[ಯಾವನೋ ಒಬ್ಬ ಶಿಷ್ಯನು ಪ್ರತ್ಯಗಾತ್ಮವಿಷಯುವನ್ನು ಹೊರತು ಇನ್ನೆಲ್ಲಿಯೂ ಆಶ್ರಯುವನ್ನು ಕಾಣದೆ ಬ್ರಹ್ಮನಿಷ್ಠನಾದ ಗುರುವಿನ ಬಳಿಗೆ ವಿಧಿಪ್ರಕಾರ ಬಂದು, ಅಭಯವೂ ನಿತ್ಯವೂ ಮಂಗಳವೂ ಅಚಲವೂ ಆದುದನ್ನು ಇಚ್ಛಿಸುವವನಾಗಿ ಈ ಪ್ರಕಾರ ಪ್ರಶ್ನಿಸಿದನು.]

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್
ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೨ ॥

ಯತ್ = ಯಾವ ಕಾರಣದಿಂದ **ಶ್ರೋತ್ರಸ್ಯ** = ಕಿವಿಗೆ **ಶ್ರೋತ್ರಂ** = ಕಿವಿಯೊ, **ಮನಸಃ** = ಮನಸ್ಸಿಗೆ **ಮನಃ** = ಮನಸ್ಸೊ, **ವಾಚಃ ಹ** = ವಾಕ್ಕಿಗೆ **ವಾಚಂ** [ಇಲ್ಲಿ ದ್ವಿತೀಯಾವಿಭಕ್ತಿಯನ್ನು 'ವಾಕ್' ಎಂದು ಪ್ರಥಮಾವಿಭಕ್ತಿಯಾಗಿ ತೆಗೆದುಕೊಳ್ಳಬೇಕು.] = ವಾಕ್ಕೊ, **ಸಃ ಉ** = ಅದು **ಪ್ರಾಣಸ್ಯ**=ಪ್ರಾಣಕ್ಕೆ **ಪ್ರಾಣಃ** = ಪ್ರಾಣವು, **ಚಕ್ಷುಷಃ**=ಕಣ್ಣಿಗೆ **ಚಕ್ಷುಃ**=ಕಣ್ಣು. **ಅತಿಮುಚ್ಯ** =[ಶ್ರೋತ್ರಾದಿ ಇಂದ್ರಿಯಗಳಲ್ಲಿ ಆತ್ಮಭಾವವನ್ನು] ಬಿಟ್ಟು **ಧೀರಾಃ** = ವಿವೇಕಿಗಳು **ಅಸ್ಮಾತ್ ಲೋಕಾತ್** = ಈ ಲೋಕದಿಂದ **ಪ್ರೇತ್ಯ** = ಹೋಗಿ **ಅಮೃತಾಃ ಭವಂತಿ** = ಅಮೃತರಾಗುತ್ತಾರೆ.

೨. (ಆಚಾರ್ಯ): (ಅದು) ಕಿವಿಗೆ ಕಿವಿ, ಮನಸ್ಸಿಗೆ ಮನಸ್ಸು, ವಾಕ್ಕಿಗೆ ವಾಕ್ಕು; ಅದು ಪ್ರಾಣಕ್ಕೆ ಪ್ರಾಣವು, ಕಣ್ಣಿಗೆ ಕಣ್ಣು. (ಹೀಗೆ ತಿಳಿದುಕೊಂಡು) ವಿವೇಕಿಗಳು (ಶ್ರೋತ್ರಾದಿ ಇಂದ್ರಿಯಗಳಲ್ಲಿ ಆತ್ಮಭಾವವನ್ನು) ಬಿಟ್ಟು ಈ ಲೋಕದಿಂದ ಹೋಗಿ[೧] ಅಮೃತರಾಗುತ್ತಾರೆ.

[ಮನಸ್ಸು ಪ್ರಾಣ ಇಂದ್ರಿಯ ಮೊದಲಾದುವುಗಳಿಗೆ ತಮ್ಮ ವಿಷಯಗಳನ್ನು ಪ್ರಕಾಶಗೊಳಿಸುವ ಸಾಮರ್ಥ್ಯ, ಚೈತನ್ಯವೂ ನಿತ್ಯವೂ ಆದ ಆತ್ಮಜ್ಯೋತಿಯಿಂದಲೇ ಉಂಟಾಗುತ್ತದೆ. ಏಕೆಂದರೆ ಇಂದ್ರಿಯಾದಿಗಳಿಗೆ ಸ್ವರೂಪತಃ ಚೈತನ್ಯಶಕ್ತಿಯಿಲ್ಲ. ಇದನ್ನು ತಿಳಿಯದ ಅವಿವೇಕಿಯು ಇಂದ್ರಿಯಾದಿಗಳ ಗುಂಪನ್ನು ಆತ್ಮವೆಂದು ಭಾವಿಸುತ್ತಾನೆ. ಆದರೆ ಜ್ಞಾನಿಯು ಇಡಿಯ ಕರಣಸಮೂಹದ ಪ್ರವೃತ್ತಿ ಆತ್ಮನಿಗಾಗಿಯೇ ಆಗುತ್ತಿರುವುದೆಂದು ತಿಳಿದಿರುತ್ತಾನೆ.

[೧] ಹೆಂಡತಿ ಮಕ್ಕಳು ಸ್ನೇಹಿತರು ನೆಂಟರು ಇವರಲ್ಲಿ 'ನಾನು', 'ನನ್ನದು' ಎಂಬ ಭಾವನೆಯು ವ್ಯವಹಾರಲಕ್ಷಣವಾಗಿರುವ (ಈ ಸಂಸಾರದಿಂದ) ಹಿಂತಿರುಗಿ ಎಂದರೆ ಸರ್ವೈಷಣಗಳನ್ನೂ ಬಿಟ್ಟು; ಅಥವಾ ಸತ್ತಮೇಲೆ ಎಂಬ ಅರ್ಥವನ್ನೂ ಮಾಡಬಹುದು.]

ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್ ॥ ೩ ॥

ತತ್ರ=ಅಲ್ಲಿಗೆ **ಚಕ್ಷುಃ**=ಕಣ್ಣು **ನ ಗಚ್ಛತಿ**=ಹೋಗುವುದಿಲ್ಲ, **ವಾಕ್**=ವಾಕ್ಕು **ನ ಗಚ್ಛತಿ**=ಹೋಗುವುದಿಲ್ಲ, **ನೋ ಮನಃ**=ಮನಸ್ಸು ಹೋಗುವುದಿಲ್ಲ; **ನ ವಿದ್ಮಃ**= ನಾವು ಅರಿಯೆವು; **ಯಥಾ**=ಹೇಗೆ **ಏತತ್**=ಇದನ್ನು **ಅನುಶಿಷ್ಯಾತ್**=ತಿಳಿಸಿಕೊಡಬೇಕೊ **ನ ವಿಜಾನೀಮಃ**=ಅರಿಯೆವು.

೩. ಅಲ್ಲಿಗೆ[೧] ಕಣ್ಣು ಹೋಗುವುದಿಲ್ಲ, ವಾಕ್ಕು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ; (ಇದನ್ನು) ನಾವು ಅರಿಯೆವು; ಇದನ್ನು ಹೇಗೆ ತಿಳಿಸಿಕೊಡಬೇಕೊ (ಅದನ್ನೂ) ಅರಿಯೆವು.[೨]

[ಇಂದ್ರಿಯಮನಸ್ಸುಗಳ ಆತ್ಮವೇ ಬ್ರಹ್ಮ; ಆದುದರಿಂದ ತನ್ನ ಸ್ವರೂಪವನ್ನು ತಿಳಿದುಕೊಳ್ಳಲು ಇವುಗಳಿಗೆ ಸಾಧ್ಯವಿಲ್ಲ.

೧ ಬ್ರಹ್ಮವು ಇರುವಲ್ಲಿಗೆ.

೨ ಕರಣಗೋಚರವಾದ ವಸ್ತುವನ್ನು ಜಾತಿಗುಣಕ್ರಿಯಾವಿಶೇಷಣಗಳಿಂದ ಇನ್ನೊಬ್ಬನಿಗೆ ತಿಳಿಸಬಹುದು. ಆದುದರಿಂದ ಜಾತ್ಯಾದಿವಿಶೇಷಣಗಳಿಲ್ಲದ ಬ್ರಹ್ಮವನ್ನು ತಿಳಿಸಿಕೊಡುವುದು ಕಷ್ಟ. ಉಪದೇಶವನ್ನು ಮಾಡಲು ಮತ್ತು ಅದರ ಅರ್ಥವನ್ನು ತಿಳಿದುಕೊಳ್ಳಲು ವಿಶೇಷ ಪ್ರಯತ್ನವನ್ನು ಮಾಡಬೇಕು.]

ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ ।
ಇತಿ ಶುಶ್ರುಮ ಪೂರ್ವೇಷಾಂ ಯೇ ನ ನಸ್ತದ್ವ್ಯಾಚಚಕ್ಷಿರೇ ॥ ೪ ॥

ತತ್ = ಅದು **ವಿದಿತಾತ್** = ತಿಳಿದಿರುವುದಕ್ಕಿಂತ **ಅನ್ಯತ್ ಏವ** = ಬೇರೆ, **ಅಥೋ** = ಮತ್ತು **ಅವಿದಿತಾತ್** = ತಿಳಿಯದಿರುವುದಕ್ಕಿಂತ **ಅಧಿ** = ಬೇರೆ; **ಯೇ** = ಯಾರು **ನಃ** = ನಮಗೆ **ತತ್**=ಅದನ್ನು **ವ್ಯಾಚಚಕ್ಷಿರೇ**=ವಿವರಿಸಿದರೊ [**ತೇಷಾಂ**= ಅಂತಹ] **ಪೂರ್ವೇಷಾಂ** = ಪೂರ್ವಾಚಾರ್ಯರಿಂದ **ಇತಿ** = ಹೀಗೆ **ಶುಶ್ರುಮ**= ಕೇಳಿದ್ದೇವೆ.

೪. ಅದು ತಿಳಿದಿರುವುದಕ್ಕಿಂತ೧ ಬೇರೆ ಮತ್ತು ತಿಳಿಯದಿರುವುದಕ್ಕಿಂತ೨ ಬೇರೆ; ಯಾರು ನಮಗೆ ಅದನ್ನು ವಿವರಿಸಿದರೊ (ಅಂತಹ) ಪೂರ್ವಾಚಾರ್ಯರಿಂದ ಹೀಗೆ ಕೇಳಿದ್ದೇವೆ.೩

[ಪ್ರತ್ಯಕ್ಷಾದಿಪ್ರಮಾಣಗಳಿಂದ ಬ್ರಹ್ಮವನ್ನು ತಿಳಿಸಿಕೊಡಲು ಆಗದಿದ್ದರೂ ಆಗಮದಿಂದ ಉಪದೇಶಿಸಲು ಸಾಧ್ಯವೆಂಬುದನ್ನು ಈ ಮಂತ್ರವು ಸೂಚಿಸಿದೆ.

೧ ಜ್ಞಾನಕ್ಕೆ ವಿಷಯವಾದ ವ್ಯಾಕೃತವಸ್ತುವಿಗಿಂತ.

೨ ವ್ಯಾಕೃತಕ್ಕೆ ಕಾರಣವಾದ ಅವಿದ್ಯಾಲಕ್ಷಣವುಳ್ಳ ಅವ್ಯಾಕೃತಕ್ಕಿಂತ.

೩ ಹೀಗೆ ಸರ್ವಾತ್ಮವೂ ಸರ್ವವಿಶೇಷರಹಿತವೂ ಆದ ಚಿನ್ಮಾತ್ರಜ್ಯೋತಿಯ ಬ್ರಹ್ಮತ್ವವನ್ನು ಪ್ರತಿಪಾದಿಸುವ ವಾಕ್ಯವು ಆಚಾರ್ಯೋಪದೇಶಪರಂಪರೆಯಿಂದ ಬಂದಿದೆ. ಬ್ರಹ್ಮವನ್ನು ತರ್ಕದಿಂದಾಗಲಿ ಅಧ್ಯಯನದಿಂದಾಗಲಿ ತಪೋಯಜ್ಞಾದಿಗಳಿಂದಾಗಲಿ ತಿಳಿದುಕೊಳ್ಳಲು ಸಾಧ್ಯವಿಲ್ಲ.]

ಯದ್ವಾಚಾಽನಭ್ಯುದಿತಂ ಯೇನ ವಾಗಭ್ಯುದ್ಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೫ ॥

ಯತ್=ಯಾವುದು **ವಾಚಾ** = ವಾಕ್ಕಿನಿಂದ **ಅನಭ್ಯುದಿತಂ** = ವ್ಯಕ್ತವಾಗುವುದಿಲ್ಲವೊ, **ಯೇನ** = ಯಾವುದರಿಂದ **ವಾಕ್** = ವಾಕ್ಕು **ಅಭ್ಯುದ್ಯತೇ** = ವ್ಯಕ್ತವಾಗು

ವುದೊ, ತತ್ ಏವ=ಅದನ್ನೇ ತ್ವಂ=ನೀನು ಬ್ರಹ್ಮ=ಬ್ರಹ್ಮವೆಂದು ವಿದ್ಧಿ=ತಿಳಿ; ಯತ್=ಯಾವುದನ್ನು ಇದಂ=ಇದು (ಎಂದು) ಉಪಾಸತೇ=ಉಪಾಸನೆಮಾಡುತ್ತಾರೆಯೊ ಇದಂ ನ=ಇದಲ್ಲ.

೫. ಯಾವುದು ವಾಕ್ಕಿನಿಂದ ವ್ಯಕ್ತವಾಗುವುದಿಲ್ಲವೊ, ಯಾವುದರಿಂದ ವಾಕ್ಕು ವ್ಯಕ್ತವಾಗುವುದೊ ಅದನ್ನೇ ನೀನು ಬ್ರಹ್ಮವೆಂದು[1] ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಇದಲ್ಲ.[2]

[[1] ಆತ್ಮಸ್ವರೂಪವೇ ಬ್ರಹ್ಮ; ಎಲ್ಲಕ್ಕಿಂತಲೂ ಬೃಹತ್ತಾಗಿರುವುದರಿಂದ ಬ್ರಹ್ಮವೆಂದು ಹೆಸರು. ವ್ಯವಹಾರಕ್ಕೆ ವಿಷಯವಲ್ಲದ, ನಿರ್ವಿಶೇಷವೂ ಸಾಮ್ಯವೂ ಆದ ಬ್ರಹ್ಮದಲ್ಲಿ ಉಂಟಾಗುತ್ತಿರುವ 'ಕರ್ತೃತ್ವ', 'ಭೋಕ್ತೃತ್ವ' ವೊದಲಾದ ಉಪಾಧಿಗಳನ್ನು ತಳ್ಳಿ ಹಾಕಿ ನಿರ್ವಿಶೇಷನಾದ ಆತ್ಮನನ್ನೇ ಬ್ರಹ್ಮವೆಂದು ತಿಳಿಯಬೇಕು.

[2] ಯಾವುದನ್ನು 'ಇದು' ಎಂದು ಉಪಾಧಿಭೇದಗಳಿಂದ ಕೂಡಿದ ಅನಾತ್ಮರಾದ ಈಶ್ವರಾದಿಗಳನ್ನು ಉಪಾಸಿಸುತ್ತಾರೆಯೊ ಆ 'ಇದು' ಬ್ರಹ್ಮವಲ್ಲ.]

ಯನ್ಮನಸಾ ನ ಮನುತೇ ಯೇನಾಹುರ್ಮನೋ ಮತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೬ ॥

ಯತ್=ಯಾವುದನ್ನು **ಮನಸಾ**=ಮನಸ್ಸಿನಿಂದ **ನ ಮನುತೇ**=ಮನನ ಮಾಡುವುದಿಲ್ಲವೊ, **ಯೇನ**=ಯಾವುದರಿಂದ **ಮನಃ**=ಮನಸ್ಸು **ಮತಂ**=ಮನನ ಮಾಡಲ್ಪಡುವುದು [ಎಂದು] **ಆಹುಃ**=ಹೇಳುತ್ತಾರೆಯೊ **ತತ್ ಏವ**=ಅದನ್ನೇ **ತ್ವಂ**=ನೀನು **ಬ್ರಹ್ಮ**=ಬ್ರಹ್ಮವೆಂದು **ವಿದ್ಧಿ**=ತಿಳಿ; **ಯತ್**=ಯಾವುದನ್ನು **ಇದಂ**=ಇದು [ಎಂದು] **ಉಪಾಸತೇ**=ಉಪಾಸನೆಮಾಡುತ್ತಾರೆಯೊ **ಇದಂ ನ**=ಇದಲ್ಲ.

೬. ಯಾವುದನ್ನು ಮನಸ್ಸಿನಿಂದ[1] ಮನನಮಾಡಲು ಆಗುವುದಿಲ್ಲವೊ, ಯಾವುದರಿಂದ ಮನಸ್ಸು ಮನನಮಾಡಲ್ಪಟ್ಟಿದೆಯೆಂದು ಹೇಳುವರೊ ಅದನ್ನೇ[2] ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆ ಮಾಡುತ್ತಾರೆಯೊ ಇದಲ್ಲ.

[[1] ತನ್ನೊಳಗಿರುವ ಚೈತನ್ಯಜ್ಯೋತಿಯಿಂದ ಪ್ರಕಾಶಿಸಲ್ಪಟ್ಟ ಮನಸ್ಸಿಗೆ ಮನನ ಸಾಮರ್ಥ್ಯ ಉಂಟಾಗಿದೆ.

[2] ಮನಸ್ಸಿನ ಆತ್ಮವಾದ ಪ್ರತ್ಯಕ್‌ಚೈತನ್ಯ.]

ಯಚ್ಚಕ್ಷುಷಾ ನ ಪಶ್ಯತಿ ಯೇನ ಚಕ್ಷೂಂಷಿ ಪಶ್ಯತಿ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೭ ॥

ಯತ್=ಯಾವುದನ್ನು ಚಕ್ಷುಷಾ=ಕಣ್ಣಿನಿಂದ ನ ಪಶ್ಯತಿ=ನೋಡುವುದಿಲ್ಲವೊ, ಯೇನ=ಯಾವುದರಿಂದ ಚಕ್ಷೂಂಷಿ=ಕಣ್ಣುಗಳನ್ನು ಪಶ್ಯತಿ=ನೋಡುತ್ತಾನೆಯೊ, ತತ್ ಏವ ತ್ವಂ ಬ್ರಹ್ಮ ವಿದ್ಧಿ; ಯತ್ ಇದಂ ಉಪಾಸತೇ ಇದಂ ನ.

೭. ಯಾವುದನ್ನು ಕಣ್ಣಿನಿಂದ ನೋಡುವುದಿಲ್ಲವೊ, ಯಾವುದರಿಂದ ಕಣ್ಣುಗಳನ್ನು ನೋಡುತ್ತಾನೆಯೊ[1] ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಇದಲ್ಲ.

[[1] ಯಾವುದರ ಮೂಲಕ ಅಂತಃಕರಣದ ವೃತ್ತಿಭೇದದಿಂದ ಭಿನ್ನವಾದ ಚಕ್ಷು ವೃತ್ತಿಗಳನ್ನು ನೋಡುತ್ತಾನೆಯೊ ಎಂದರೆ ಆತ್ಮಚೈತನ್ಯಜ್ಯೋತಿಯಿಂದ ವಿಷಯೀಕರಿಸು ತ್ತಾನೆಯೊ.]

ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಮ್ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೮ ॥

ಯತ್=ಯಾವುದನ್ನು ಶ್ರೋತ್ರೇಣ=ಕಿವಿಯಿಂದ ನ ಶೃಣೋತಿ=ಕೇಳುವುದಿಲ್ಲವೊ, ಯೇನ=ಯಾವುದರಿಂದ ಇದಂ=ಈ ಶ್ರೋತ್ರಂ=ಕಿವಿಯು ಶ್ರುತಂ=ಕೇಳಲ್ಪಡುವುದೊ, ತತ್ ಏವ ತ್ವಂ ಬ್ರಹ್ಮ ವಿದ್ಧಿ; ಯತ್ ಇದಂ ಉಪಾಸತೇ ಇದಂ ನ.

೮. ಯಾವುದನ್ನು ಕಿವಿಯಿಂದ ಕೇಳುವುದಿಲ್ಲವೊ, ಯಾವುದರಿಂದ ಕಿವಿಯು ಕೇಳಲ್ಪಡುವುದೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಇದಲ್ಲ.

ಯತ್ ಪ್ರಾಣೇನ ನ ಪ್ರಾಣಿತಿ ಯೇನ ಪ್ರಾಣಃ ಪ್ರಣೀಯತೇ ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥ ೯ ॥

ಯತ್=ಯಾವುದನ್ನು ಪ್ರಾಣೇನ=ಪ್ರಾಣದಿಂದ ನ ಪ್ರಾಣಿತಿ=ಆಘ್ರಾಣಿಸುವುದಿಲ್ಲವೊ, ಯೇನ=ಯಾವುದರಿಂದ ಪ್ರಾಣಃ=ಪ್ರಾಣವು ಪ್ರಣೀಯತೇ=ಕಳುಹಿಸಲ್ಪಡುವುದೊ, ತತ್ ಏವ ತ್ವಂ ಬ್ರಹ್ಮ ವಿದ್ಧಿ; ಯತ್ ಇದಂ ಉಪಾಸತೇ ಇದಂ ನ.

೯. ಯಾವುದನ್ನು ಪ್ರಾಣದಿಂದ ಆಘ್ರಾಣಿಸುವುದಿಲ್ಲವೊ, ಯಾವುದರಿಂದ ಪ್ರಾಣವು ಕಳುಹಿಸಲ್ಪಡುವುದೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಇದಲ್ಲ.

ಎರಡನೆಯ ಖಂಡ

ಯದಿ ಮನ್ಯಸೇ ಸುವೇದೇತಿ ದಭ್ರಮೇವಾಪಿ ನೂನಂ
ತ್ವಂ ವೇತ್ಥ ಬ್ರಹ್ಮಣೋ ರೂಪಂ ಯದಸ್ಯ ತ್ವಂ
ಯದಸ್ಯ ದೇವೇಷ್ವಥ ನು ಮೀಮಾಂಸ್ಯಮೇವ ತೇ
ಮನ್ಯೇ ವಿದಿತಮ್ ॥ ೧ ॥

ಸುವೇದ ಇತಿ = ಚೆನ್ನಾಗಿ ತಿಳಿದಿರುತ್ತೇನೆ ಎಂದು **ಯದಿ ಮನ್ಯಸೇ** = ನೀನು ಅರಿತಿದ್ದರೆ, **ಅಸ್ಯ ಬ್ರಹ್ಮಣಃ** = ಈ ಬ್ರಹ್ಮದ **ಯತ್ ರೂಪಂ** = ಯಾವ ರೂಪವನ್ನು **ತ್ವಂ ವೇತ್ಥ** = ನೀನು ತಿಳಿದಿರುತ್ತೀಯೊ, **ದೇವೇಷು** = ದೇವತೆಗಳಲ್ಲಿ **ಅಸ್ಯ** = ಇದರ **ಯತ್** [**ರೂಪಂ**] = ಯಾವ ರೂಪವನ್ನು **ತ್ವಂ**=ನೀನು [**ವೇತ್ಥ**=ತಿಳಿದಿರುತ್ತೀಯೊ], [**ತತ್ ಸರ್ವಂ**=ಅವೆಲ್ಲವೂ] **ನೂನಂ**=ಖಂಡಿತವಾಗಿ **ದಭ್ರಂ ಏವ ಅಪಿ**= ಅಲ್ಪವೇ; **ಅಥ ನು**= ಆದುದರಿಂದ **ತೇ**= ನಿನ್ನ [**ಬ್ರಹ್ಮ**= ಬ್ರಹ್ಮವು] **ಮೀಮಾಂಸ್ಯಂ ಏವ**= ವಿಚಾರಿಸಲ್ಪಡತಕ್ಕದ್ದು. **ಮನ್ಯೇ ವಿದಿತಂ**= ತಿಳಿಯಿತು ಎಂದು ಎಣಿಸುತ್ತೇನೆ.

೧. (ಆಚಾರ್ಯ): 'ನಾನು ಚೆನ್ನಾಗಿ ತಿಳಿದಿರುತ್ತೇನೆ' ಎಂದು ನೀನು ಅರಿತಿದ್ದರೆ, (ಅಧ್ಯಾತ್ಮೋಪಾಧಿಯಿಂದ[೧] ಪರಿಚ್ಛಿನ್ನವಾದ) ಈ ಬ್ರಹ್ಮದ ಯಾವ ರೂಪವನ್ನು ನೀನು ತಿಳಿದಿರುತ್ತೀಯೊ ಮತ್ತು (ಅಧಿದೈವತೋಪಾಧಿಯಿಂದ ಪರಿಚ್ಛಿನ್ನವಾದ) ಇದರ ಯಾವ (ರೂಪವನ್ನು) ದೇವತೆಗಳಲ್ಲಿ (ತಿಳಿದಿರುತ್ತೀಯೊ ಅವೆಲ್ಲವೂ) ಅಲ್ಪವೇ. ಆದುದರಿಂದ ನಿನ್ನ ಬ್ರಹ್ಮವು ಇನ್ನೂ ವಿಚಾರಿಸಲ್ಪಡತಕ್ಕದ್ದು.

(ಶಿಷ್ಯ): 'ನನಗೆ ತಿಳಿಯಿತು' ಎಂದು ಎಣಿಸುತ್ತೇನೆ.೨

[ಯಾವ ವಸ್ತುವು ನಮ್ಮ ಜ್ಞಾನಕ್ಕೆ ವಿಷಯವಾಗಿದೆಯೊ ಅದನ್ನು ಚೆನ್ನಾಗಿ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಬಾಹ್ಯವಸ್ತುವನ್ನು ತಿಳಿಯುವಂತೆ, 'ನಾನು ಬ್ರಹ್ಮವನ್ನು ಚೆನ್ನಾಗಿ ತಿಳಿದಿರುತ್ತೇನೆ' ಎಂದು ಹೇಳಲು ಆಗುವುದಿಲ್ಲ. ಏಕೆಂದರೆ ತಿಳಿಯುವವನಿಗಿಂತ ಬ್ರಹ್ಮವು ಬೇರೆಯಲ್ಲ; ಹಾಗಾಗಿದ್ದರೆ ಬ್ರಹ್ಮವನ್ನು ಇತರ ವಸ್ತುಗಳಂತೆ ತಿಳಿಯಬಹುದಾಗಿತ್ತು. ಬೆಂಕಿಯು ತನಗಿಂತ ಬೇರೆಯಾದ ವಸ್ತುವನ್ನು ಸುಡುತ್ತೆ ವಿನಾ ತನ್ನನ್ನು ತಾನೆ ಸುಡಲಾರದು. ಶಿಷ್ಯನಲ್ಲಿ 'ನಾನೇ ಬ್ರಹ್ಮವೆಂದು ನನ್ನನ್ನು ನಾನು ಚೆನ್ನಾಗಿ ಅರಿತುಕೊಂಡೆನು' ಎಂಬ ತಪ್ಪು ಭಾವನೆ ಬರದಿರಲೆಂದು ಆಚಾರ್ಯನು ಈ ರೀತಿ ಹೇಳುತ್ತಾನೆ.

[೧] ಶರೀರಗಳಿಂದ.

೨ ಹೀಗೆಂದು ಆಚಾರ್ಯನು ಹೇಳಲು ಶಿಷ್ಯನು ಏಕಾಂತದಲ್ಲಿ ಕುಳಿತು ಸಮಾಹಿತನಾಗಿ ಆಚಾರ್ಯನು ಹಿಂದೆ ಉಪದೇಶಿಸಿದ ಶಾಸ್ತ್ರವನ್ನು ಅರ್ಥತಃ ವಿಚಾರಮಾಡಿ ತರ್ಕತಃ ನಿರ್ಧರಿಸಿ ಅನುಭವವನ್ನು ಮಾಡಿಕೊಂಡು ಆಚಾರ್ಯನ ಸಮೀಪಕ್ಕೆ ಬಂದು 'ಈಗ ನನಗೆ ಬ್ರಹ್ಮವು ತಿಳಿಯಿತು ಎಂದು ಎಣಿಸುತ್ತೇನೆ' ಎಂದನು.]

ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚ ।
ಯೋ ನಸ್ತದ್ವೇದ ತದ್ವೇದ ನೋ ನ ವೇದೇತಿ ವೇದ ಚ ॥ ೨ ॥

ಅಹಂ=ನಾನು ಸುವೇದ ಇತಿ=ಚೆನ್ನಾಗಿ ತಿಳಿದಿರುತ್ತೇನೆ ಎಂದು ನ ಮನ್ಯೇ=ಎಣಿಸಿರುವುದಿಲ್ಲ, ನ ವೇದ ಇತಿ=ತಿಳಿದುಕೊಂಡಿಲ್ಲ ಎಂದು ನೋ=ಎಣಿಸಿರುವುದಿಲ್ಲ, ವೇದ ಚ=ತಿಳಿದೂ ಇರುತ್ತೇನೆ; ನಃ=ನಮ್ಮಲ್ಲಿ ಯಃ=ಯಾವನು ನೋ ನ ವೇದ ಇತಿ ವೇದ ಚ = ತಿಳಿದುಕೊಂಡಿಲ್ಲವೆಂದು ಎಣಿಸಿರುವುದಿಲ್ಲ, ತಿಳಿದೂ ಇರುತ್ತೇನೆ [ಇತಿ=ಎಂದು] ತತ್=ಅದನ್ನು ವೇದ=ಅರಿಯುತ್ತಾನೆಯೊ [ಸಃ=ಅವನೇ] ತತ್=ಅದನ್ನು ವೇದ=ಅರಿತಿರುತ್ತಾನೆ.

೨. ನಾನು ಚೆನ್ನಾಗಿ ತಿಳಿದಿರುತ್ತೇನೆಂದು ಎಣಿಸಿರುವುದಿಲ್ಲ, ತಿಳಿದುಕೊಂಡಿಲ್ಲವೆಂದೂ ಎಣಿಸಿರುವುದಿಲ್ಲ, ತಿಳಿದೂ ಇರುತ್ತೇನೆ;[೧] 'ತಿಳಿದುಕೊಂಡಿಲ್ಲವೆಂದೂ ಎಣಿಸಿರುವುದಿಲ್ಲ, ತಿಳಿದೂ ಇರುತ್ತೇನೆ' ಎಂಬುದನ್ನು ನಮ್ಮಲ್ಲಿ ಯಾವನು ಅರಿತಿರುತ್ತಾನೆಯೊ (ಅವನೇ) ಅದನ್ನು ಅರಿತಿರುತ್ತಾನೆ.

[ಆಚಾರ್ಯನು ಶಿಷ್ಯನನ್ನು ಕುರಿತು 'ಬ್ರಹ್ಮವು ನಿನಗೆ ಹೇಗೆ ತಿಳಿದಿದೆ?' ಎಂದು ಪ್ರಶ್ನಿಸಲು, ಇದು ಶಿಷ್ಯನು ಕೊಟ್ಟ ಉತ್ತರ.

೧ 'ವೇದ ಚ' ಎಂಬುದರಲ್ಲಿ 'ಚ'–ಶಬ್ದವನ್ನು ಪ್ರಯೋಗಿಸಿರುವುದರಿಂದ 'ತಿಳಿದೂ ಇಲ್ಲ' ಎಂದು ಅಧ್ಯಾಹಾರಮಾಡಿಕೊಳ್ಳಬೇಕು.]

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್ ॥ ೩ ॥

ಯಸ್ಯ ಅಮತಂ=ಯಾವನಿಗೆ [ಬ್ರಹ್ಮವನ್ನು ಅರಿತಿದ್ದೇನೆಂಬ] ತಿಳಿವಳಿಕೆ ಇಲ್ಲವೊ ತಸ್ಯ ಮತಂ = ಅವನಿಗೆ ತಿಳಿದಿದೆ; ಯಸ್ಯ ಮತಂ = ಯಾವನಿಗೆ [ಬ್ರಹ್ಮವನ್ನು ಅರಿತಿದ್ದೇನೆಂಬ] ತಿಳಿವಳಿಕೆ ಇದೆಯೊ ಸಃ=ಅವನು ನ ವೇದ=ಅರಿಯನು. ವಿಜಾನತಾಂ=ತಿಳಿದವರಿಗೆ ಅವಿಜ್ಞಾತಂ = ತಿಳಿಯದೆ ಇರುತ್ತದೆ, ಅವಿಜಾನತಾಂ = ತಿಳಿಯದವರಿಗೆ ವಿಜ್ಞಾತಂ=ತಿಳಿದಿರುತ್ತದೆ.

೩. ಯಾವನಿಗೆ[೧] (ಬ್ರಹ್ಮವನ್ನು ಅರಿತಿದ್ದೇನೆಂಬ) ತಿಳಿವಳಿಕೆ ಇಲ್ಲವೊ ಅವನಿಗೆ ತಿಳಿದಿದೆ; ಯಾವನಿಗೆ (ಬ್ರಹ್ಮವನ್ನು ಅರಿತಿದ್ದೇನೆಂಬ) ತಿಳಿವಳಿಕೆ

ಇದೆಯೊ ಅವನಿಗೆ ತಿಳಿದಿಲ್ಲ. ತಿಳಿದವರಿಗೆ[೨] ತಿಳಿಯದೆ ಇರುತ್ತದೆ, ತಿಳಿಯದವರಿಗೆ[೩] ತಿಳಿದಿರುತ್ತದೆ.

[ಶ್ರುತಿಯು ತನ್ನ ರೂಪದಿಂದಲೇ ಗುರುಶಿಷ್ಯರ ಸಂವಾದದ ವಿಷಯುವನ್ನು ಉಪಸಂಹಾರಮಾಡುತ್ತದೆ.

[೧] ಯಾವ ಬ್ರಹ್ಮಜ್ಞಾನಿಗೆ ಬ್ರಹ್ಮವು ತಿಳಿದುಕೊಳ್ಳತಕ್ಕ ವಿಷಯುವಲ್ಲವೆಂಬ ಮತವಿರುವುದೊ.

[೨] ಸಮ್ಯಗ್ಜ್ಞಾನಿಗಳಿಗೆ ಬ್ರಹ್ಮವು ಜ್ಞಾನಕ್ಕೆ ವಿಷಯುವಲ್ಲವೆಂದು ತಿಳಿದಿರುತ್ತದೆ.

[೩] 'ತಿಳಿಯದವರು' ಎಂದರೆ ಏನನ್ನೂ ತಿಳಿಯದವರು ಎಂಬ ಅರ್ಥವಲ್ಲ, ಅಸಮ್ಯಗ್ದರ್ಶಿಗಳು ಎಂದು ಅರ್ಥ. ಇವರು ಇಂದ್ರಿಯಮನೋಬುದ್ಧಿಗಳಲ್ಲಿ ಆತ್ಮನನ್ನು ನೋಡುವುದರಿಂದ ಬ್ರಹ್ಮವು ಇವರ ಜ್ಞಾನಕ್ಕೆ ವಿಷಯುವಾಗಿರುತ್ತದೆ.]

ಪ್ರತಿಬೋಧವಿದಿತಂ ಮತಮಮೃತತ್ವಂ ಹಿ ವಿಂದತೇ ।
ಆತ್ಮನಾ ವಿಂದತೇ ವೀರ್ಯಂ ವಿದ್ಯಯಾ ವಿಂದತೇಽಮೃತಮ್ ॥ ೪ ॥

ಪ್ರತಿಬೋಧ-ವಿದಿತಂ=ಪ್ರತಿಬೋಧದಲ್ಲಿಯೂ ತಿಳಿಯಲ್ಪಟ್ಟದ್ದು **ಮತಂ**=ತಿಳಿಯಲ್ಪಟ್ಟಿದೆ, **ಹಿ**=ಏಕೆಂದರೆ **ಅಮೃತತ್ವಂ**=ಅಮೃತತ್ವವನ್ನು **ವಿಂದತೇ**=ಹೊಂದುತ್ತಾನೆ. **ಆತ್ಮನಾ**=ಆತ್ಮನಿಂದ **ವೀರ್ಯಂ**=ವೀರ್ಯವನ್ನು **ವಿಂದತೇ**=ಹೊಂದುತ್ತಾನೆ, **ವಿದ್ಯಯಾ**=ವಿದ್ಯೆಯಿಂದ **ಅಮೃತಂ**=ಅಮೃತವನ್ನು **ವಿಂದತೇ**=ಹೊಂದುತ್ತಾನೆ.

೪. (ಯಾವಾಗ ಬ್ರಹ್ಮವು) ಪ್ರತಿಬೋಧದಲ್ಲಿಯೂ[೧] ತಿಳಿಯಲ್ಪಡುತ್ತದೆಯೊ (ಆಗ) ತಿಳಿದಂತಾಗುತ್ತದೆ,[೨] ಏಕೆಂದರೆ ಅಮೃತತ್ವವನ್ನು ಹೊಂದುತ್ತಾನೆ.[೩] ಆತ್ಮನಿಂದ ವೀರ್ಯವನ್ನು[೪] ಹೊಂದುತ್ತಾನೆ, ವಿದ್ಯೆಯಿಂದ[೫] ಅಮೃತವನ್ನು ಹೊಂದುತ್ತಾನೆ.

[ಬ್ರಹ್ಮವು ನಿಜವಾಗಿ ತಿಳಿಯದೆ ಇದ್ದರೆ ಲೌಕಿಕರಿಗೂ ಬ್ರಹ್ಮಜ್ಞಾನಿಗಳಿಗೂ ಯಾವ ವಿಶೇಷವೂ ಇಲ್ಲವೆಂದಾಯಿತು; 'ತಿಳಿಯುವವರಿಗೆ ತಿಳಿಯದೆ ಇರುತ್ತದೆ' ಎಂಬುದು ಪರಸ್ಪರ ವಿರುದ್ಧವಾದ ಮಾತು. ಆ ಬ್ರಹ್ಮವನ್ನು ಹೇಗೆ ತಿಳಿದರೆ ಸರಿಯಾಗಿ ತಿಳಿದಂತೆ ಆಗುವುದು ಎಂಬುದನ್ನು ಈ ಮಂತ್ರವು ಉಪದೇಶಿಸುತ್ತದೆ.

[೧] ಬುದ್ಧಿಯ ಪ್ರತಿಯೊಂದು ಪ್ರತ್ಯಯಗಳಲ್ಲಿಯೂ.

[೨] ಸರ್ವಪ್ರತ್ಯಯಗಳನ್ನು ನೋಡುವವನೂ ಚಿಚ್ಛಕ್ತಿಸ್ವರೂಪನೂ ಆದ ಆತ್ಮನು ಪ್ರತ್ಯಯಗಳಿಂದಲೇ ಎಲ್ಲ ಪ್ರತ್ಯಯಗಳಲ್ಲಿಯೂ ಸಮವಾಗಿ ಕಾಣಿಸಿಕೊಳ್ಳುತ್ತಾನೆ. ಅಂತರಾತ್ಮನನ್ನು ಅರಿಯುವುದಕ್ಕೆ ಬೇರೆ ದ್ವಾರವಿಲ್ಲ. ಆದುದರಿಂದ ಪ್ರತ್ಯಯಗಳ

ಪ್ರತ್ಯಗಾತ್ಮನೆಂದು ಯಾವಾಗ ಬ್ರಹ್ಮವನ್ನು ಅರಿಯುತ್ತೇವೆಯೊ ಆಗ ಅದನ್ನು ಸ
ಯಾಗಿ ತಿಳಿದಂತಾಗುತ್ತದೆ.

[೩] ಬೋಧವು ಪ್ರತ್ಯಗಾತ್ಮನ ವಿಷಯುವು ಅಥವಾ ಪ್ರತ್ಯಗಾತ್ಮನು ಸರ್ವಪ್ರತ್ಯಯಗ
ಸಾಕ್ಷಿ ಎಂಬ ಜ್ಞಾನವು ಅಮೃತತ್ವಕ್ಕೆ ಕಾರಣವಾಗಿರುತ್ತದೆ.

[೪] ಅನಿತ್ಯಗಳಾದ ಧನ ಸಹಾಯ ಮಂತ್ರ ಔಷಧ ತಪಸ್ಸು ಯೋಗ–ಇವುಗಳಿಂ
ಉತ್ಪನ್ನವಾದ ವೀರ್ಯವು ಮೃತ್ಯುವನ್ನು ಜಯಿಸಲಾರದು; ಆತ್ಮವಿದ್ಯೆಯಿಂ
ಉಂಟಾದ ವೀರ್ಯವು ಮಾತ್ರ ಮೃತ್ಯುವನ್ನು ಜಯಿಸಬಲ್ಲದು. ಇದನ್ನು ಆತ್ಮನಿಂದಲ
ಪಡೆಯಬೇಕು.

[೫] ಆತ್ಮವಿಷಯುವಾದ ವಿದ್ಯೆಯಿಂದ.]

ಇಹ ಚೇದವೇದೀದಥ ಸತ್ಯಮಸ್ತಿ
ನ ಚೇದಿಹಾವೇದೀನ್ಮಹತೀ ವಿನಷ್ಟಿಃ ।
ಭೂತೇಷು ಭೂತೇಷು ವಿಚಿತ್ಯ ಧೀರಾಃ
ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ ॥ ೫ ॥

ಇಹ=ಇಲ್ಲಿ **ಅವೇದೀತ್ ಚೇತ್**=ತಿಳಿದುಕೊಂಡರೆ **ಅಥ**=ಆಗ **ಸತ್ಯಂ**=ಸತ್ಯ
ಅಸ್ತಿ = ಉಂಟು; **ಇಹ** = ಇಲ್ಲಿ **ನ ಅವೇದೀತ್ ಚೇತ್** = ಅರಿತುಕೊಳ್ಳದಿದ್ದ
ಮಹತೀ = ದೊಡ್ಡ **ವಿನಷ್ಟಿಃ** = ವಿನಾಶ. **ಧೀರಾಃ** = ವಿವೇಕಿಗಳು **ಭೂತೇಷು**
ಭೂತೇಷು = ಸರ್ವಪ್ರಾಣಿಗಳಲ್ಲಿಯೂ **ವಿಚಿತ್ಯ** = ಆತ್ಮತತ್ತ್ವವನ್ನು ತಿಳಿದುಕೊಂಡು
ಅಸ್ಮಾತ್ ಲೋಕಾತ್ = ಈ ಲೋಕದಿಂದ **ಪ್ರೇತ್ಯ**=ಹೋಗಿ **ಅಮೃತಾಃ ಭವಂತಿ**=
ಅಮೃತರಾಗುತ್ತಾರೆ.

೫. (ಅಧಿಕಾರಿಯಾದ ಮನುಷ್ಯನು) ಇಲ್ಲಿಯೇ ಅರಿತುಕೊಂಡರೆ[೧]
ಆಗ ಸತ್ಯವುಂಟು.[೨] ಇಲ್ಲಿ ಅರಿತುಕೊಳ್ಳದಿದ್ದರೆ ದೊಡ್ಡ ವಿನಾಶವಾಗುತ್ತದೆ.[೩]
ವಿವೇಕಿಗಳು ಸರ್ವಪ್ರಾಣಿಗಳಲ್ಲಿಯೂ ಆತ್ಮತತ್ತ್ವವನ್ನು ಅರಿತುಕೊಂಡು ಈ
ಲೋಕದಿಂದ ಹೋಗಿ[೪] ಅಮೃತರಾಗುತ್ತಾರೆ.[೫]

[[೧] ಹಿಂದೆ ಹೇಳಿದ ಲಕ್ಷಣವುಳ್ಳ ಆತ್ಮನನ್ನು ಹಿಂದೆ ಹೇಳಿದ ಪ್ರಕಾರದಿಂದ.

[೨] ಈ ಮನುಷ್ಯಜನ್ಮದಲ್ಲಿ ಅವಿನಾಶವುಂಟು, ಅರ್ಥವುಂಟು; ಸದ್ಭಾವವುಂಟು
ಅಥವಾ ಪರಮಾರ್ಥವಾದ ಸತ್ಯವುಂಟು.

[೩] ಜನ್ಮಜರಾಮರಣಾದಿಗಳ ಸಂಸಾರಗತಿ.

[೪] ಒಂದನೆಯ ಖಂಡದ ಎರಡನೆಯ ಮಂತ್ರದ ಟಿಪ್ಪಣಿಯನ್ನು ನೋಡಿ.

[೫] ಬ್ರಹ್ಮವೇ ಆಗುವರು.]

ಮೂರನೆಯ ಖಂಡ

ಬ್ರಹ್ಮ ಹ ದೇವೇಭ್ಯೋ ವಿಜಿಗ್ಯೇ, ತಸ್ಯ ಹ ಬ್ರಹ್ಮಣೋ ವಿಜಯೇ ದೇವಾ ಅಮಹೀಯಂತ । ತ ಐಕ್ಷಂತಾಸ್ಮಾಕಮೇವಾಯಂ ವಿಜಯೋಽಸ್ಮಾಕಮೇವಾಯಂ ಮಹಿಮೇತಿ ॥ ೧ ॥

ಬ್ರಹ್ಮ ಹ = ಬ್ರಹ್ಮವು ದೇವೇಭ್ಯಃ = ದೇವತೆಗಳಿಗೆ ವಿಜಿಗ್ಯೇ = ಜಯಿಸಿತು. ತಸ್ಯ=ಆ ಬ್ರಹ್ಮಣಃ ಹ = ಬ್ರಹ್ಮದ ವಿಜಯೇ=ಜಯದಲ್ಲಿ ದೇವಾಃ = ದೇವತೆಗಳು ಅಮಹೀಯಂತ = ಮಹಿಮಾನ್ವಿತರಾದರು. ತೇ = ಅವರು ಐಕ್ಷಂತ = ಯೋಚನೆ ಮಾಡಿದರು— ಅಯಂ = ಈ ವಿಜಯಃ = ಜಯವು ಅಸ್ಮಾಕಂ ಏವ = ನಮ್ಮದೇ, ಅಯಂ=ಈ ಮಹಿಮಾ=ಮಹಿಮೆಯು ಅಸ್ಮಾಕಂ ಏವ=ನಮ್ಮದೇ ಇತಿ=ಎಂದು.

೧. ಬ್ರಹ್ಮವು ದೇವತೆಗಳಿಗಾಗಿ ಜಯಿಸಿತು. ಆ ಬ್ರಹ್ಮದ ಜಯದಲ್ಲಿ ದೇವತೆಗಳು ಮಹಿಮಾನ್ವಿತರಾದರು. 'ಈ ಜಯವು ನಮ್ಮದೇ, ಈ ಮಹಿಮೆಯು ನಮ್ಮದೇ' ಎಂದು ಅವರು ಯೋಚನೆಮಾಡಿದರು.[೧]

[ಬ್ರಹ್ಮವು ಅವಿಜ್ಞಾತವಾದುದರಿಂದ, ಅದು ಇಲ್ಲವೇ ಇಲ್ಲ ಎಂಬ ಭ್ರಾಂತಿ ಬರದಿರಲೆಂದು ಅಥವಾ ಬ್ರಹ್ಮವಿದ್ಯೆಯ ಸ್ತುತಿಗಾಗಿ ಅಥವಾ ನಾಲ್ಕನೆಯ ಖಂಡದಲ್ಲಿ ಬಂದಿರುವ ಉಪನಿಷತ್ತಿನ ವಿಧಿಗಾಗಿ ಈ ಆಖ್ಯಾಯಿಕೆಯನ್ನು ಹೇಳಲಾಗಿದೆ.

[೧] ಪ್ರತ್ಯಗಾತ್ಮನೂ ಸರ್ವಜ್ಞನೂ ಪ್ರಾಣಿಗಳ ಸರ್ವಕರ್ಮಗಳಿಗೆ ಫಲವನ್ನು ಕೊಡುವವನೂ ಸರ್ವಶಕ್ತನೂ ಆದ ಈಶ್ವರನು ಜಗತ್ತಿನ ಸ್ಥಿತಿಗಾಗಿ ಕೊಟ್ಟ ವಿಜಯವಿದು ಮತ್ತು ಆ ಮಹಿಮೆ ಅವನದೇ ಎಂದು ಇವರು ತಿಳಿಯಲಿಲ್ಲ.]

ತದ್ಧೈಷಾಂ ವಿಜಜ್ಞೌ, ತೇಭ್ಯೋ ಹ ಪ್ರಾದುರ್ಬಭೂವ, ತನ್ನ ವ್ಯಜಾನತ ಕಿಮಿದಂ ಯಕ್ಷಮಿತಿ ॥ ೨ ॥

ತತ್ ಹ = ಅದು ಏಷಾಂ = ಇವರ [ಮಿಥ್ಯೇಕ್ಷಣಂ = ತಪ್ಪುಭಾವನೆಯನ್ನು] ವಿಜಜ್ಞೌ=ತಿಳಿದುಕೊಂಡಿತು, ತೇಭ್ಯಃ ಹ = ಅವರಿಗೆ ಪ್ರಾದುರ್ಬಭೂವ = ಕಾಣಿಸಿಕೊಂಡಿತು. ಇದಂ=ಈ ಯಕ್ಷಂ=ಯಕ್ಷವು ಕಿಂ ಇತಿ=ಯಾವುದು ಎಂದು ತತ್= ಅದನ್ನು ನ ವ್ಯಜಾನತ=ತಿಳಿಯಲಿಲ್ಲ.

೨. ಅದು ಇವರ (ತಪ್ಪುಭಾವನೆಯನ್ನು) ತಿಳಿದುಕೊಂಡಿತು;[೧] ಅವರಿಗೆ ಕಾಣಿಸಿಕೊಂಡಿತು.[೨] ಈ ಯಕ್ಷವು ಯಾವುದೆಂಬುದನ್ನು (ಅವರು) ತಿಳಿಯಲಿಲ್ಲ.

[[೧] ಸರ್ವಪ್ರಾಣಿಗಳ ಕರಣಗಳನ್ನೂ ಪ್ರೇರಿಸುವುದಾದುದರಿಂದ ಬ್ರಹ್ಮವು ಎಲ್ಲವನ್ನೂ ತಿಳಿಯಬಲ್ಲದು.

[೨] ಅಸುರರಂತೆ ದೇವತೆಗಳೂ ಮಿಥ್ಯಾಭಿಮಾನದಿಂದ ಸೋತುಹೋಗಬಾರದೆಂದು.]

ತೇಽಗ್ನಿಮಬ್ರುವನ್ ಜಾತವೇದ ಏತದ್ವಿಜಾನೀಹಿ
ಕಿಮೇತದ್ಯಕ್ಷಮಿತಿ, ತಥೇತಿ ॥ ೩ ॥

ತೇ = ಅವರು **ಅಗ್ನಿಂ** = ಅಗ್ನಿಯನ್ನು ಕುರಿತು **ಅಬ್ರುವನ್** = ಹೇಳಿದರು; **ಜಾತವೇದಃ** = ಹೇ ಜಾತವೇದನೆ **ಕಿಂ ಏತತ್ ಯಕ್ಷಂ** = ಈ ಯಕ್ಷವು ಯಾವುದು **ಇತಿ**=ಎಂದು **ಏತತ್**=ಇದನ್ನು **ವಿಜಾನೀಹಿ**=ತಿಳಿದುಕೊ **ತಥಾ ಇತಿ**=ಆಗಲಿ ಎಂದು.

೩. ಅವರು ಅಗ್ನಿಯನ್ನು[೧] ಕುರಿತು, 'ಹೇ ಜಾತವೇದ, ಈ ಯಕ್ಷವು ಯಾವುದೆಂಬುದನ್ನು ತಿಳಿದುಕೊ' ಎಂದು ಹೇಳಿದರು. 'ಹಾಗೆಯೇ ಆಗಲಿ' ಎಂದು (ಅಗ್ನಿಯು ಹೇಳಿದನು).

[[೧] ಅಗ್ನಿ ದೇವತೆಗಳ ಪುರೋಹಿತ, ಸರ್ವಜ್ಞ.]

ತದಭ್ಯದ್ರವತ್, ತಮಭ್ಯವದತ್ ಕೋಽಸೀತಿ, ಅಗ್ನಿರ್ವಾ
ಅಹಮಸ್ಮೀತ್ಯಬ್ರವೀಜ್ಜಾತವೇದಾ ವಾ ಅಹಮಸ್ಮೀತಿ ॥ ೪ ॥

[ಅಗ್ನಿಃ = ಅಗ್ನಿಯು] **ತತ್ ಅಭ್ಯದ್ರವತ್** = ಅದರ ಸಮೀಪಕ್ಕೆ ಓಡಿದನು, **ತಂ**=ಅವನನ್ನು **ಅಭ್ಯವದತ್**=ಪ್ರಶ್ನಿಸಿತು **ಕಃ ಅಸಿ ಇತಿ** = ನೀನು ಯಾರು ಎಂದು, **ಅಹಂ** = ನಾನು **ಅಗ್ನಿಃ ವೈ ಅಸ್ಮಿ ಇತಿ** = ಅಗ್ನಿಯೇ ಆಗಿರುವೆನು ಎಂದು, **ಅಹಂ** = ನಾನು **ಜಾತವೇದಾಃ ವೈ ಅಸ್ಮಿ ಇತಿ** = ಜಾತವೇದನೇ ಆಗಿರುವೆನು ಎಂದು **ಅಬ್ರವೀತ್** = ಹೇಳಿದನು.

೪. (ಅಗ್ನಿಯು) ಅದರ ಸಮೀಪಕ್ಕೆ ಓಡಿದನು. 'ನೀನು ಯಾರು?' ಎಂದು ಅವನನ್ನು (ಯಕ್ಷವು) ಪ್ರಶ್ನಿಸಿತು. 'ನಾನು ಅಗ್ನಿಯೇ ಆಗಿರುವೆನು, ಜಾತವೇದನೇ ಆಗಿರುವೆನು' ಎಂದು ಹೇಳಿದನು.

[ಅಗ್ನಿಗೆ ತಾನು ಪ್ರಶ್ನಿಸಬೇಕೆಂದು ಇಚ್ಛೆ ಇದ್ದರೂ ಆ ಯಕ್ಷದ ಬಳಿಯಲ್ಲಿ ಏನೂ ಮಾತನಾಡಲಾಗಲಿಲ್ಲ.]

ತಸ್ಮಿಂಸ್ತ್ವಯಿ ಕಿಂ ವೀರ್ಯಮಿತ್ಯಪೀದಂ
ಸರ್ವಂ ದಹೇಯಂ ಯದಿದಂ ಪೃಥಿವ್ಯಾಮಿತಿ ॥ ೫ ॥

[ಬ್ರಹ್ಮ = ಯಕ್ಷರೂಪದಲ್ಲಿರುವ ಬ್ರಹ್ಮವು] **ತಸ್ಮಿನ್ ತ್ವಯಿ** = ಅಂತಹ ನಿನ್ನಲ್ಲಿ **ಕಿಂ ವೀರ್ಯಂ**=ಯಾವ ವೀರ್ಯವುಂಟು **ಇತಿ**=ಎಂದು, **ಯತ್ ಇದಂ**=ಏನೇನು **ಪೃಥಿವ್ಯಾಂ**=ಭೂಮಿಯಲ್ಲಿ [ಅಸ್ತಿ=ಇದೆಯೊ] **ಇದಂ ಸರ್ವಂ ಅಪಿ** = ಇದೆಲ್ಲವನ್ನೂ **ದಹೇಯಂ**=ಸುಡಬಲ್ಲೆನು **ಇತಿ**=ಎಂದು.

೫. 'ಅಂತಹ ನಿನ್ನಲ್ಲಿ ಯಾವ ವೀರ್ಯವುಂಟು?' ಎಂದು (ಯಕ್ಷವು ಪ್ರಶ್ನಿಸಲು), (ಅಗ್ನಿಯು) 'ಈ ಭೂಮಿಯಲ್ಲಿ[೧] ಏನೇನಿದೆಯೊ ಇದೆಲ್ಲವನ್ನೂ ಸುಡಬಲ್ಲೆನು' ಎಂದು ಹೇಳಿದನು.

[[೧]'ಭೂಮಿಯಲ್ಲಿ' ಎಂದು ಹೇಳಿರುವುದು ಉಪಲಕ್ಷಣ; ಏಕೆಂದರೆ ಅಂತರಿಕ್ಷದಲ್ಲಿರುವುದನ್ನು ಅಗ್ನಿಯು ಸುಡಬಲ್ಲದು.]

ತಸ್ಮೈ ತೃಣಂ ನಿದಧಾವೇತದ್ದಹೇತಿ, ತದುಪಪ್ರೇಯಾಯ ಸರ್ವಜವೇನ, ತನ್ನ ಶಶಾಕ ದಗ್ಧುಂ, ಸ ತತ ಏವ ನಿವವೃತೇ, ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೬ ॥

ಏತತ್=ಇದನ್ನು **ದಹ**=ಸುಡು **ಇತಿ**=ಎಂದು **ತಸ್ಮೈ**=ಅವನ ಎದುರಿಗೆ **ತೃಣಂ**=ಹುಲ್ಲುಕಡ್ಡಿಯನ್ನು **ನಿದಧೌ**=ಇಟ್ಟಿತು. [ಅಗ್ನಿಃ=ಅಗ್ನಿಯು] **ಸರ್ವಜವೇನ**=ಸರ್ವವೇಗದಿಂದ **ತತ್ ಉಪಪ್ರೇಯಾಯ**=ಅದರ ಬಳಿ ಓಡಿದನು; **ತತ್**=ಅದನ್ನು **ದಗ್ಧುಂ**=ಸುಡಲು **ನ ಶಶಾಕ**=ಶಕ್ತನಾಗಲಿಲ್ಲ; **ಸಃ**=ಅವನು **ತತಃ ಏವ**=ಅಲ್ಲಿಂದಲೇ **ನಿವವೃತೇ**=ಹಿಂತಿರುಗಿದನು. **ಯತ್ ಏತತ್ ಯಕ್ಷಂ ಇತಿ**=ಇದು ಯಾವ ಯಕ್ಷವು ಎಂದು **ಏತತ್**=ಇದನ್ನು **ವಿಜ್ಞಾತುಂ**=ತಿಳಿಯಲು **ನ ಅಶಕಂ**=ಶಕ್ತನಾಗಲಿಲ್ಲ.

೬. 'ಇದನ್ನು ಸುಡು' ಎಂದು ಅವನ ಎದುರಿಗೆ (ಒಂದು) ಹುಲ್ಲುಕಡ್ಡಿಯನ್ನು (ಯಕ್ಷವು) ಇಟ್ಟಿತು. (ಅಗ್ನಿಯು) ಸರ್ವವೇಗದಿಂದಲೂ ಅದರ ಬಳಿಗೆ ಓಡಿದನು; ಅದನ್ನು ಸುಡಲು ಶಕ್ತನಾಗಲಿಲ್ಲ. ಅವನು ಅಲ್ಲಿಂದಲೇ ಹಿಂತಿರುಗಿದನು. 'ಇದು ಯಾವ ಯಕ್ಷವು ಎಂಬುದನ್ನು ತಿಳಿಯಲು ಶಕ್ತನಾಗಲಿಲ್ಲ' (ಎಂದು ದೇವತೆಗಳಿಗೆ ಹೇಳಿದನು).

ಅಥ ವಾಯುಮಬ್ರುವನ್ ವಾಯವೇತದ್ವಿಜಾನೀಹಿ, ಕಿಮೇತದ್ಯಕ್ಷಮಿತಿ; ತಥೇತಿ ॥ ೭ ॥

ಅಥ=ಅನಂತರ **ವಾಯುಂ**=ವಾಯುವನ್ನು ಕುರಿತು **ಅಬ್ರುವನ್**=ಹೇಳಿದರು: **ವಾಯೋ**=ಹೇ ವಾಯು **ಕಿಂ ಏತತ್ ಯಕ್ಷಂ**=ಈ ಯಕ್ಷವು ಯಾವುದು **ಇತಿ**=ಎಂದು **ಏತತ್**=ಇದನ್ನು **ವಿಜಾನೀಹಿ**=ತಿಳಿದುಕೊ. **ತಥಾ ಇತಿ**=ಆಗಲಿ ಎಂದು.

೭. ಅನಂತರ ವಾಯುವನ್ನು ಕುರಿತು 'ಹೇ ವಾಯು, ಈ ಯಕ್ಷವು ಯಾವುದೆಂಬುದನ್ನು ತಿಳಿದುಕೊ' ಎಂದು ಹೇಳಿದರು. 'ಹಾಗೆಯೇ ಆಗಲಿ' ಎಂದು (ವಾಯುವು ಹೇಳಿದನು).

**ತದಭ್ಯದ್ರವತ್, ತಮಭ್ಯವದತ್ ಕೋಽಸೀತಿ, ವಾಯುರ್ವಾ
ಅಹಮಸ್ಮೀತ್ಯಬ್ರವೀನ್ಮಾತರಿಶ್ವಾ ವಾ ಅಹಮಸ್ಮೀತಿ ॥ ೮ ॥**

[ವಾಯುಃ = ವಾಯುವು] ತತ್ ಅಭ್ಯದ್ರವತ್, ತಂ ಅಭ್ಯವದತ್ ಕಃ ಅಸಿ ಇತಿ. ಅಹಂ=ನಾನು ವಾಯುಃ ವೈ ಅಸ್ಮಿ ಇತಿ=ವಾಯುವೇ ಆಗಿರುವೆನು ಎಂದು, ಅಹಂ = ನಾನು ಮಾತರಿಶ್ವಾ ವೈ ಅಸ್ಮಿ ಇತಿ = ಮಾತರಿಶ್ವನೇ ಆಗಿರುವೆನು ಎಂದು ಅಬ್ರವೀತ್ = ಹೇಳಿದನು.

೮. (ವಾಯುವು) ಅದರ ಸಮೀಪಕ್ಕೆ ಓಡಿದನು. 'ನೀನು ಯಾರು?' ಎಂದು ಅವನನ್ನು (ಯಕ್ಷವು) ಪ್ರಶ್ನಿಸಿತು. 'ನಾನು ವಾಯುವೇ[1] ಆಗಿರುವೆನು, ಮಾತರಿಶ್ವನೇ[2] ಆಗಿರುವೆನು' ಎಂದು ಹೇಳಿದನು.

[[1] ಚಲಿಸುವುದರಿಂದ ಅಥವಾ ವಾಸನೆಯನ್ನುಂಟುಮಾಡುವುದರಿಂದ ವಾಯುವೆಂದು ಹೆಸರು.

[2] ಅಂತರಿಕ್ಷದಲ್ಲಿ ಚಲಿಸುವುದರಿಂದ ಮಾತರಿಶ್ವನೆಂದು ಹೆಸರು.]

**ತಸ್ಮಿಂಸ್ತ್ವಯಿ ಕಿಂ ವೀರ್ಯಮಿತ್ಯಪೀದಂ
ಸರ್ವಮಾದದೀಯ ಯದಿದಂ ಪೃಥಿವ್ಯಾಮಿತಿ ॥ ೯ ॥**

ತಸ್ಮಿನ್ ತ್ವಯಿ ಕಿಂ ವೀರ್ಯಂ ಇತಿ, ಯತ್ ಇದಂ ಪೃಥಿವ್ಯಾಂ, ಇದಂ ಸರ್ವಂ ಅಪಿ ಆದದೀಯ=ಎತ್ತಬಲ್ಲೆನು ಇತಿ=ಎಂದು.

೯. 'ಅಂತಹ ನಿನ್ನಲ್ಲಿ ಯಾವ ವೀರ್ಯವುಂಟು?' ಎಂದು (ಯಕ್ಷವು ಪ್ರಶ್ನಿಸಲು), (ವಾಯುವು) 'ಈ ಭೂಮಿಯಲ್ಲಿ ಏನೇನಿದೆಯೊ ಇದೆಲ್ಲವನ್ನೂ ಎತ್ತಬಲ್ಲೆನು' ಎಂದು ಹೇಳಿದನು.

**ತಸ್ಮೈ ತೃಣಂ ನಿದಧಾವೇತದಾದತ್ಸ್ವೇತಿ, ತದುಪಪ್ರೇಯಾಯ
ಸರ್ವಜವೇನ, ತನ್ನ ಶಶಾಕಾದಾತುಂ, ಸ ತತ ಏವ ನಿವವೃತೇ
ನೈತದಶಕಂ ವಿಜ್ಞಾತುಂ ಯದೇತದ್ಯಕ್ಷಮಿತಿ ॥ ೧೦ ॥**

ಏತತ್=ಇದನ್ನು ಆದತ್ಸ್ವ=ಎತ್ತು ಇತಿ=ಎಂದು ತಸ್ಮೈ ತೃಣಂ ನಿದಧೌ. [ವಾಯುಃ] ಸರ್ವಜವೇನ ತತ್ ಉಪಪ್ರೇಯಾಯ; ತತ್=ಅದನ್ನು ಆದಾತುಂ=ಎತ್ತಲು ನ ಶಶಾಕ=ಶಕ್ತನಾಗಲಿಲ್ಲ. ಸಃ ತತಃ ಏವ ನಿವವೃತೇ. ಯತ್ ಏತತ್ ಯಕ್ಷಂ ಇತಿ ಏತತ್ ವಿಜ್ಞಾತುಂ ನ ಅಶಕಂ.

೧೦. 'ಇದನ್ನು ಎತ್ತು' ಎಂದು ಅವನ ಎದುರಿಗೆ (ಒಂದು) ಹುಲ್ಲು ಕಡ್ಡಿಯನ್ನು (ಯಕ್ಷವು) ಇಟ್ಟಿತು. (ವಾಯುವು) ಸರ್ವವೇಗದಿಂದಲೂ ಅದರ ಬಳಿಗೆ ಓಡಿದನು. ಅದನ್ನು ಎತ್ತಲು ಶಕ್ತನಾಗಲಿಲ್ಲ. ಅವನು ಅಲ್ಲಿಂದಲೇ ಹಿಂತಿರುಗಿದನು. 'ಇದು ಯಾವ ಯಕ್ಷವು ಎಂಬುದನ್ನು ತಿಳಿಯಲು ಶಕ್ತನಾಗಲಿಲ್ಲ' (ಎಂದು ದೇವತೆಗಳಿಗೆ ಹೇಳಿದನು).

ಅಥೇಂದ್ರಮಬ್ರುವನ್ ಮಘವನ್ನೇತದ್ವಿಜಾನೀಹಿ,
ಕಿಮೇತದ್ಯಕ್ಷಮಿತಿ; ತಥೇತಿ । ತದಭ್ಯದ್ರವತ್, ತಸ್ಮಾತ್
ತಿರೋದಧೇ ॥ ೧೧ ॥

ಅಥ=ಅನಂತರ **ಇಂದ್ರಂ**=ಇಂದ್ರನನ್ನು ಕುರಿತು **ಅಬ್ರುವನ್**=ಹೇಳಿದರು: **ಮಘವನ್**=ಹೇ ಮಘವಂತನೆ **ಕಿಂ ಏತತ್ ಯಕ್ಷಂ**=ಈ ಯಕ್ಷವು ಯಾವುದು **ಇತಿ**=ಎಂದು **ಏತತ್**=ಇದನ್ನು **ವಿಜಾನೀಹಿ**=ತಿಳಿದುಕೊ **ತಥಾ ಇತಿ**=ಆಗಲಿ ಎಂದು. **ತತ್ ಅಭ್ಯದ್ರವತ್**=ಅದರ ಸಮೀಪಕ್ಕೆ ಓಡಿದನು. **ತಸ್ಮಾತ್**=ಅವನಿಂದ **ತಿರೋದಧೇ**=ಮರೆಯಾಯಿತು.

೧೧. ಅನಂತರ ಇಂದ್ರನನ್ನು ಕುರಿತು 'ಹೇ ಮಘವಂತನೆ,[1] ಈ ಯಕ್ಷವು ಯಾವುದೆಂಬುದನ್ನು ತಿಳಿದುಕೊ' ಎಂದು ಹೇಳಿದರು. 'ಹಾಗೆಯೇ ಆಗಲಿ' ಎಂದು (ಇಂದ್ರನು ಹೇಳಿದನು). (ಇಂದ್ರನು) ಅದರ ಸಮೀಪಕ್ಕೆ ಓಡಿದನು. ಅದು ಅವನಿಂದ ಮರೆಯಾಯಿತು.

[[1] ಬಲವುಳ್ಳವನು ಎಂದರ್ಥ.]

ಸ ತಸ್ಮಿನ್ನೇವಾಕಾಶೇ ಸ್ತ್ರಿಯಮಾಜಗಾಮ ಬಹುಶೋಭ-
ಮಾನಾಮುಮಾಂ ಹೈಮವತೀಮ್ । ತಾಂ ಹೋವಾಚ
ಕಿಮೇತದ್ಯಕ್ಷಮಿತಿ ॥ ೧೨ ॥

ಸಃ=ಅವನು **ತಸ್ಮಿನ್ ಏವ ಆಕಾಶೇ**=ಆ ಆಕಾಶದಲ್ಲಿಯೇ **ಹೈಮವತೀಂ**=ಹೈಮವತಿಯೂ **ಬಹುಶೋಭಮಾನಾಂ**=ಬಹುಶೋಭಮಾನಳೂ **ಸ್ತ್ರಿಯಂ**=ಸ್ತ್ರೀರೂಪಿಯೂ [ಆದ] **ಉಮಾಂ**=ಉಮೆಯನ್ನು **ಆಜಗಾಮ**=ಹೊಂದಿದನು. **ತಾಂ ಹ**=ಅವಳನ್ನು **ಉವಾಚ**=ಹೇಳಿದನು: **ಕಿಂ ಏತತ್ ಯಕ್ಷಂ**=ಈ ಯಕ್ಷವು ಯಾವುದು **ಇತಿ**=ಎಂದು.

೧೨. ಅವನು ಆ ಆಕಾಶದಲ್ಲಿಯೇ[೧] (ಇದ್ದ) ಹೈಮವತಿಯೂ[೨] ಬಹುಶೋಭಮಾನಳೂ[೩] ಸ್ತ್ರೀರೂಪಿಯೂ ಆದ ಉಮೆಯ ಸಮೀಪಕ್ಕೆ ಬಂದನು. 'ಈ ಯಕ್ಷವು ಯಾವುದು?' ಎಂದು ಅವಳನ್ನು ಕೇಳಿದನು.

[ಇಂದ್ರನಿಗೆ ಯಕ್ಷದಲ್ಲಿದ್ದ ಭಕ್ತಿಯನ್ನು ನೋಡಿ ಬ್ರಹ್ಮವಿದ್ಯೆಯು ಉಮಾರೂಪದಿಂದ ಕಾಣಿಸಿಕೊಂಡಿತು.

[೧] ಯಕ್ಷವು ಮರೆಯಾದ ಆಕಾಶಪ್ರದೇಶದಲ್ಲಿಯೇ.

[೨] ಚಿನ್ನದ ಆಭರಣಗಳನ್ನು ಧರಿಸಿದವಳಂತೆ ಶೋಭಿಸುತ್ತಿರುವ ಅಥವಾ ಹಿಮವಂತನ ಮಗಳಾದ.

[೩] ಶೋಭಿಸುವ ವಿದ್ಯೆಗಳಲ್ಲಿ ಬ್ರಹ್ಮವಿದ್ಯೆಯು ಅತ್ಯಂತ ಶೋಭೆಯುಳ್ಳದ್ದು.]

ನಾಲ್ಕನೆಯ ಖಂಡ

ಸಾ ಬ್ರಹ್ಮೇತಿ ಹೋವಾಚ, ಬ್ರಹ್ಮಣೋ ವಾ ಏತದ್ವಿಜಯೇ ಮಹೀಯಧ್ವಮಿತಿ । ತತೋ ಹೈವ ವಿದಾಂಚಕಾರ ಬ್ರಹ್ಮೇತಿ ॥ ೧ ॥

ಸಾ = ಅವಳು **ಉವಾಚ ಹ** = ಹೇಳಿದಳು: **ಬ್ರಹ್ಮ ಇತಿ** = ಬ್ರಹ್ಮ ಎಂದು; **ಬ್ರಹ್ಮಣಃ ವೈ** = ಬ್ರಹ್ಮದ **ವಿಜಯೇ**=ಜಯದಲ್ಲಿ **ಏತತ್ ಮಹೀಯಧ್ವಂ** = ಹೀಗೆ ಮಹಿಮೆಯನ್ನು ಹೊಂದಿದಿರಿ **ಇತಿ** = ಎಂದು. **ತತಃ ಹ ಏವ** = ಅದರಿಂದಲೇ **ಬ್ರಹ್ಮ ಇತಿ** = ಬ್ರಹ್ಮ ಎಂದು **ವಿದಾಂಚಕಾರ** = ತಿಳಿದುಕೊಂಡನು.

೧. ಉಮೆಯು ಹೇಳಿದಳು: '(ಅದು) ಬ್ರಹ್ಮ; ಬ್ರಹ್ಮದ ಜಯದಲ್ಲಿಯೇ ಹೀಗೆ ಮಹಿಮೆಯನ್ನು ಹೊಂದಿದಿರಿ.' ಅದರಿಂದಲೇ[೧] (ಇಂದ್ರನು) ಅದು ಬ್ರಹ್ಮವೆಂದು ತಿಳಿದುಕೊಂಡನು.

[[೧] ಉಮೆಯ ವಾಕ್ಯದಿಂದಲೇ.]

ತಸ್ಮಾದ್ವಾ ಏತೇ ದೇವಾ ಅತಿತರಾಮಿವಾನ್ಯಾನ್ ದೇವಾನ್ ಯದಗ್ನಿರ್ವಾಯುರಿಂದ್ರಸ್ತೇ ಹ್ಯೇನನ್ನೇದಿಷ್ಠಂ ಪಸ್ಪೃಶುಸ್ತೇ ಹ್ಯೇನತ್ ಪ್ರಥಮೋ ವಿದಾಂಚಕಾರ ಬಹ್ಮೇತಿ ॥ ೨ ॥

ಯತ್ = ಯಾವ ಕಾರಣದಿಂದ **ಅಗ್ನಿಃ ವಾಯುಃ ಇಂದ್ರಃ ಇತಿ ತೇ ಹಿ** = ಅಗ್ನಿ ವಾಯು ಇಂದ್ರ ಎಂಬ ಅವರು **ಏನತ್** = ಇದನ್ನು **ನೇದಿಷ್ಠಂ** = ಹತ್ತಿರದಿಂದ **ಪಸ್ಪೃಶುಃ** = ಮುಟ್ಟಿದರೊ, **ತೇ ಹಿ** = ಅವರು **ಏನತ್** = ಇದನ್ನು **ಬ್ರಹ್ಮ ಇತಿ** = ಬ್ರಹ್ಮವೆಂದು **ಪ್ರಥಮಃ [ಪ್ರಥಮಾಃ ಸಂತಃ]** = ಮೊದಲನೆಯವರಾಗಿ **ವಿದಾಂಚಕಾರ [ವಿದಾಂಚಕ್ರುಃ]** = ತಿಳಿದುಕೊಂಡರೊ, **ತಸ್ಮಾತ್ ವೈ** = ಆದುದರಿಂದ **ಏತೇ ದೇವಾಃ** = ಈ ದೇವತೆಗಳು **ಅನ್ಯಾನ್ ದೇವಾನ್** = ಇತರ ದೇವತೆಗಳನ್ನು **ಅತಿತರಾಂ ಇವ** = ಮೀರಿರುತ್ತಾರೆ.

೨. ಆದುದರಿಂದ ಅಗ್ನಿ ವಾಯು ಇಂದ್ರ ಎಂಬ ಈ ದೇವತೆಗಳು ಇತರ ದೇವತೆಗಳನ್ನು ಮೀರಿರುತ್ತಾರೆ; ಏಕೆಂದರೆ ಅವರು ಇದನ್ನು ಅತ್ಯಂತ ಹತ್ತಿರದಿಂದ[೧] ಮುಟ್ಟಿದರು ಮತ್ತು ಇದನ್ನು ಬ್ರಹ್ಮವೆಂದು ಮೊದಲನೆಯವರಾಗಿ ತಿಳಿದುಕೊಂಡರು.

[[೧] ಸಂಭಾಷಣೆ ದರ್ಶನಾದಿಗಳ ಮೂಲಕ.]

ತಸ್ಮಾದ್ವಾ ಇಂದ್ರೋಽತಿತರಾಮಿವಾನ್ಯಾನ್ ದೇವಾನ್ ಸ ಹ್ಯೇನನ್ನೇದಿಷ್ಠಂ ಪಸ್ಪರ್ಶ ಸ ಹ್ಯೇನತ್ ಪ್ರಥಮೋ ವಿದಾಂಚಕಾರ ಬ್ರಹ್ಮೇತಿ ॥ ೩

ಸಃ ಹಿ=ಅವನು ಏನತ್ ನೇದಿಷ್ಠಂ ಪಸ್ಪರ್ಶ=ಇದನ್ನು ಹತ್ತಿರದಿಂದ ಮುಟ್ಟಿದನು, ಸಃ ಹಿ=ಅವನು ಏನತ್ ಬ್ರಹ್ಮ ಇತಿ ಪ್ರಥಮಃ ವಿದಾಂಚಕಾರ=ಇದನ್ನು ಬ್ರಹ್ಮವೆಂದು ಮೊದಲನೆಯವನಾಗಿ ತಿಳಿದುಕೊಂಡನು; ತಸ್ಮಾತ್ ವೈ=ಆದುದರಿಂದ ಇಂದ್ರಃ=ಇಂದ್ರನು ಅನ್ಯಾನ್ ದೇವಾನ್=ಇತರ ದೇವತೆಗಳನ್ನು ಅತಿತರಾಂ ಇವ ಮೀರಿರುತ್ತಾನೆ.

೩. ಆದುದರಿಂದ ಇಂದ್ರನು ಇತರ ದೇವತೆಗಳನ್ನು ಮೀರಿರುತ್ತಾನೆ; ಏಕೆಂದರೆ ಅವನು ಇದನ್ನು ಅತ್ಯಂತ ಹತ್ತಿರದಿಂದ ಮುಟ್ಟಿದನು ಮತ್ತು ಇದನ್ನು ಬ್ರಹ್ಮವೆಂದು ಮೊದಲನೆಯವನಾಗಿ ತಿಳಿದುಕೊಂಡನು.

ತಸ್ಯೈಷ ಆದೇಶೋ ಯದೇತದ್ವಿದ್ಯುತೋ ವ್ಯದ್ಯುತದಾ೩ ಇತೀನ್ನ್ಯಮೀಮಿಷದಾ೩ ಇತ್ಯಧಿದೈವತಮ್ ॥ ೪ ॥

ತಸ್ಯ=ಅದರ[ವಿಷಯದಲ್ಲಿ] ಏಷಃ=ಇದು ಆದೇಶಃ=ಆದೇಶ ಯತ್ ಏತತ್= ಯಾವ ಈ ವಿದ್ಯುತಃ=ಮಿಂಚಿನ ವ್ಯದ್ಯುತತ್ [ವಿದ್ಯೋತನಂ] ಆ=ಹೊಳಪಿನಂತೆ ಇತ್=ಮತ್ತು ನ್ಯಮೀಮಿಷತ್ ಆ ಇತಿ=ಕಣ್ಣು ಮಿಟಿಕಿಸಿದಂತೆ ಎಂದು ಇತಿ ಅಧಿದೈವತಂ=ಇದು ಅಧಿದೈವತ.

೪. ಬ್ರಹ್ಮದ ವಿಷಯದಲ್ಲಿ ಈ ಆದೇಶವುಂಟು:[೧] 'ಮಿಂಚಿನ ಹೊಳಪಿನಂತೆ ಕಣ್ಣು ಮಿಟಿಕಿಸಿದಂತೆ (ಬ್ರಹ್ಮವು ಕ್ಷಿಪ್ರವಾಗಿ ತೋರಿಸಿಕೊಂಡು ಮಾಯವಾಗುತ್ತದೆ)'. ಇದು ಅಧಿದೈವತ.[೨]

[[೧] ಬ್ರಹ್ಮದ ಲಕ್ಷಣವನ್ನು ಯಾವ ಉಪಮೆಯಿಂದಲೂ ತಿಳಿಸಲು ಸಾಧ್ಯವಲ್ಲ. ಅಂತಹ ನಿರುಪಮವಾದ ಬ್ರಹ್ಮವನ್ನು ಉಪಮೆಯ ಮೂಲಕ ಉಪದೇಶಿಸುವುದಕ್ಕೆ ಆದೇಶವೆಂದು ಹೆಸರು.

[೨] ಈ ಉಪಮಾನವು ದೇವತಾವಿಷಯವಾದುದರಿಂದ ಅಧಿದೈವತವೆಂದು ಹೇಳಿದೆ.]

ಅಥಾಧ್ಯಾತ್ಮಂ ಯದೇತದ್ಗಚ್ಛತೀವ ಚ ಮನೋಽನೇನ ಚೈತದುಪಸ್ಮರತ್ಯಭೀಕ್ಷ್ಣಂ ಸಂಕಲ್ಪಃ ॥ ೫ ॥

ಅಥ=ಈಗ ಅಧ್ಯಾತ್ಮಂ=ಅಧ್ಯಾತ್ಮ: ಯತ್ ಮನಃ=ಯಾವ ಈ ಮನಸ್ಸು ಏತತ್=ಇದರ ಸಮೀಪಕ್ಕೆ ಗಚ್ಛತಿ ಇವ=ಹೋಗುವಂತೆ ಚ=ಮತ್ತು, [ಸಾಧಕಃ=

ಸಾಧಕನು] **ಅನೇನ**=ಇದರ ಮೂಲಕ **ಏತತ್**=ಇದನ್ನು **ಅಭೀಕ್ಷ್ಣಂ**=ಚೆನ್ನಾಗಿ **ಉಪಸ್ಮರತಿ**=ಸ್ಮರಿಸುತ್ತಾನೆ, **ಚ**=ಮತ್ತು [**ಮನಸಃ**=ಮನಸ್ಸಿನ] **ಸಂಕಲ್ಪಃ**=ಸಂಕಲ್ಪವು [**ಬ್ರಹ್ಮವಿಷಯಃ ಏವ**=ಬ್ರಹ್ಮವಿಷಯವಾದದ್ದು].

೫. ಈಗ ಅಧ್ಯಾತ್ಮ:[೧] 'ಮನಸ್ಸು ಬ್ರಹ್ಮದ ಸಮೀಪಕ್ಕೆ (ಶೀಘ್ರವಾಗಿ) ಹೋಗುವಂತೆ,[೨] (ಸಾಧಕನು) ಮನಸ್ಸಿನಿಂದ ಇದನ್ನು ಚೆನ್ನಾಗಿ ಸ್ಮರಿಸಿದಂತೆ[೩] ಮತ್ತು (ಮನಸ್ಸು ಬ್ರಹ್ಮದ ವಿಷಯದಲ್ಲಿ ಪುನಃ ಪುನಃ) ಸಂಕಲ್ಪಿಸಿದಂತೆ'.[೪]

[ಹಿಂದಿನ ಆದೇಶದಲ್ಲಿ ಬ್ರಹ್ಮವು ವಿದ್ಯುನ್ನಿಮೇಷಣಗಳಂತೆ ದ್ರುತಪ್ರಕಾಶನ ಸ್ವಭಾವವುಳ್ಳದ್ದು ಎಂದು ಹೇಳಿದ್ದಾಯಿತು. ಇಲ್ಲಿಯೂ ಕೂಡ ಬ್ರಹ್ಮವು, ಮನಸ್ಸಿನ ಪ್ರತ್ಯಯಗಳು ಉಂಟಾಗುವ ಕಾಲದಲ್ಲಿಯೇ ತೋರಿಸಿಕೊಳ್ಳುವ ಧರ್ಮವುಳ್ಳದ್ದು ಎಂದು ಹೇಳಿದೆ.

[೧] ಈಗ ಪ್ರತ್ಯಗಾತ್ಮನ ವಿಷಯವಾದ ಆದೇಶ.

[೨] ಬ್ರಹ್ಮವನ್ನು ಮುಟ್ಟುವಂತೆ, ವಿಷಯೀಕರಿಸುವಂತೆ.

[೩] ಬ್ರಹ್ಮವು ಹತ್ತಿರದಲ್ಲಿ ಇರುವಂತೆ.

[೪] ಮನಸ್ಸೇ ಉಪಾಧಿಯಾಗಿ ಉಳ್ಳ ಬ್ರಹ್ಮವು ಮನಸ್ಸಿನ ಸಂಕಲ್ಪಸ್ಮೃತ್ಯಾದಿ ಪ್ರತ್ಯಯಗಳಿಂದ ವಿಷಯೀಕರಿಸಲ್ಪಟ್ಟಂತೆ, ಅಭಿವ್ಯಕ್ತವಾದಂತೆ.]

ತದ್ಧ ತದ್ವನಂ ನಾಮ ತದ್ವನಮಿತ್ಯುಪಾಸಿತವ್ಯಂ;
ಸ ಯ ಏತದೇವಂ ವೇದಾಭಿ ಹೈನಂ ಸರ್ವಾಣಿ
ಭೂತಾನಿ ಸಂವಾಂಛಂತಿ ॥ ೬ ॥

ತತ್ ಹ=ಅದು **ತದ್ವನಂ ನಾಮ**=ತದ್ವನ ಎನಿಸಿರುವುದು, **ತದ್ವನಂ ಇತಿ**=ತದ್ವನ ಎಂದು **ಉಪಾಸಿತವ್ಯಂ**=ಉಪಾಸಿಸಲ್ಪಡತಕ್ಕದ್ದು; **ಸಃ ಯಃ**=ಯಾವ ಅವನು **ಏತತ್**=ಇದನ್ನು **ಏವಂ**=ಹೀಗೆ **ವೇದ**=ತಿಳಿಯುತ್ತಾನೆಯೊ **ಏನಂ**=ಅವನನ್ನು **ಸರ್ವಾಣಿ**=ಎಲ್ಲ **ಭೂತಾನಿ ಹ**=ಪ್ರಾಣಿಗಳೂ **ಅಭಿಸಂವಾಂಛಂತಿ**=ಇಚ್ಛಿಸುವುವು.

೬. ಅದಕ್ಕೆ 'ತದ್ವನ'[೧] ಎಂದು ಹೆಸರು; (ಅದನ್ನು) ತದ್ವನವೆಂದು ಉಪಾಸಿಸಬೇಕು. ಯಾವನು ಇದನ್ನು ಹೀಗೆಂದು ತಿಳಿಯುವನೊ ಅವನನ್ನು ಎಲ್ಲ ಪ್ರಾಣಿಗಳೂ ಇಚ್ಛಿಸುವುವು.[೨]

[[೧] ತದ್ವನ ಎಂದರೆ ಅದರ ವನ (ತಸ್ಯ ವನಂ ತದ್ವನಂ). ಬ್ರಹ್ಮವು ಎಲ್ಲ ಪ್ರಾಣಿಗಳ ಆತ್ಮವಾಗಿರುವುದರಿಂದ ವನವು ಎಂದರೆ ವನನೀಯವಾದುದು, ಭಜಿಸಲ್ಪಡತಕ್ಕದ್ದು (ವನಂ ವನನೀಯಂ ಸಂಭಜನೀಯಂ).

[೨] ಬ್ರಹ್ಮವನ್ನು ತದ್ವನವೆಂದು ಉಪಾಸನೆಮಾಡುವುದರ ಫಲ.]

ಉಪನಿಷದಂ ಭೋ ಬ್ರೂಹೀತ್ಯುಕ್ತಾ ತ
ಉಪನಿಷದ್ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಮೇತಿ ॥ ೭ ॥

ಭೋ=ಸ್ವಾಮಿ, **ಉಪನಿಷದಂ**=ಉಪನಿಷತ್ತನ್ನು **ಬ್ರೂಹಿ**=ಉಪದೇಶಿಸಿರಿ; **ತೇ**=ನಿನಗೆ **ಉಪನಿಷತ್**=ಉಪನಿಷತ್ತು **ಉಕ್ತಾ**=ಹೇಳಲ್ಪಟ್ಟಿತು, **ತೇ**=ನಿನ **ಬ್ರಾಹ್ಮೀಂ ವಾವ ಉಪನಿಷದಂ**=ಬ್ರಾಹ್ಮೀ ಉಪನಿಷತ್ತನ್ನೇ **ಅಬ್ರೂಮ**=ಹೇಳಿದ್ದೇ **ಇತಿ**=ಎಂದು.

೭. (ಶಿಷ್ಯ): 'ಸ್ವಾಮಿ, ಉಪನಿಷತ್ತನ್ನು[೧] ಉಪದೇಶಿಸಿರಿ;'

(ಆಚಾರ್ಯ): 'ನಿನಗೆ ಉಪನಿಷತ್ತು ಹೇಳಲ್ಪಟ್ಟಿತು. ಬ್ರಾಹ್ಮೀ ಉಪನಿಷತ್ತನ್ನೇ ನಿನಗೆ ಹೇಳಿರುತ್ತೇವೆ.'[೩]

[[೧] ಚಿಂತಿಸಲ್ಪಡತಕ್ಕ ರಹಸ್ಯ.
[೨] ಬ್ರಹ್ಮದ ಅಥವಾ ಪರಮಾತ್ಮನ ವಿಷಯವಾದದ್ದು.
[೩] ಶಿಷ್ಯನ ಪ್ರಶ್ನೆಯಲ್ಲಿ ಪುನರುಕ್ತಿಯ ದೋಷವಿಲ್ಲ. 'ಬ್ರಹ್ಮವಿದ್ಯೆಗೆ ಏನಾದರೂ ಶೇಷವಿದ್ದರೆ ಅಥವಾ ಸಹಕಾರಿಸಾಧನವಿದ್ದರೆ ತಿಳಿಸಿ, ಇಲ್ಲದಿದ್ದರೆ, "ಇಲ್ಲ" ಎಂದು ಹೇಳಿ' ಎಂಬುದು ಅವನ ಪ್ರಶ್ನೆ. 'ನಿನಗೆ ಉಪನಿಷತ್ತು ಹೇಳಲ್ಪಟ್ಟಿತು' ಎಂದು ಗುರು ಕೊಟ್ಟ ಉತ್ತರ ಅವಧಾರಣೆ ಮಾಡುವುದಕ್ಕಾಗಿ.]

ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ
ವೇದಾಃ ಸರ್ವಾಂಗಾನಿ ಸತ್ಯಮಾಯತನಮ್ ॥ ೮ ॥

ತಪಃ=ತಪಸ್ಸು **ದಮಃ**=ದಮ **ಕರ್ಮ**=ಕರ್ಮ **ಇತಿ**=ಎಂಬ ಇವು **ತಸ್ಯೈ**= ಅದಕ್ಕೆ **ಪ್ರತಿಷ್ಠಾ**=ಪ್ರತಿಷ್ಠೆ; **ವೇದಾಃ**=ವೇದಗಳು **ಸರ್ವಾಂಗಾನಿ**=ಎಲ್ಲ ಅಂಗಗಳು; **ಸತ್ಯಂ**=ಸತ್ಯವು **ಆಯತನಂ**=ಆಶ್ರಯ.

೮. ತಪಸ್ಸು[೧] ದಮ[೨] ಕರ್ಮ[೩] ಎಂಬ ಇವು ಅದಕ್ಕೆ[೪] ಪ್ರತಿಷ್ಠೆ;[೫] (ಹಾಗೆಯೇ) ವೇದಗಳೂ (ಅದರ) ಎಲ್ಲ[೬] ಅಂಗಗಳೂ;[೭] ಸತ್ಯವು[೮] (ಅದರ) ಆಶ್ರಯ.

[ಬ್ರಹ್ಮವಿದ್ಯೆಯನ್ನು ಪಡೆದುಕೊಳ್ಳುವುದಕ್ಕೆ ತಪೋದಮಕರ್ಮಗಳು ಸಾಧನಗಳು. ಇವುಗಳಿಂದ ಸಂಸ್ಕಾರವನ್ನು ಪಡೆದವನಿಗೆ ಸತ್ತ್ವಶುದ್ಧಿಯ ಮೂಲಕ ತತ್ತ್ವಜ್ಞಾನ ಉಂಟಾಗುತ್ತದೆ.
[೧] ಶರೀರೇಂದ್ರಿಯಮನಸ್ಸುಗಳ ಸಮಾಧಾನ.
[೨] ಉಪಶಮ.
[೩] ಅಗ್ನಿಹೋತ್ರಾದಿಕರ್ಮಗಳು.

[೪] ಬ್ರಹ್ಮವಿದ್ಯೆಗೆ.

[೫] ಪಾದಗಳು.

[೬] ಶಿಕ್ಷೆಯೇ ಮೊದಲಾದುವು.

[೭] ತಪೋದಮಕರ್ಮಗಳಂತೆ ವೇದಗಳೂ ಅದರ ಆರು ಅಂಗಗಳೂ ಪ್ರತಿಷ್ಠೆ. ಭಾಷ್ಯಕಾರರು ಹೇಳಿರುವಂತೆ ವೇದಗಳು ಕರ್ಮಜ್ಞಾನಗಳನ್ನು ಪ್ರಕಾಶಿಸುವುದರಿಂದಲೂ, ಅಂಗಗಳು ಅವುಗಳನ್ನು ರಕ್ಷಿಸುವುದರಿಂದಲೂ ಅವು ಬ್ರಹ್ಮವಿದ್ಯೆಗೆ ಪ್ರತಿಷ್ಠೆಯಾಗಿರುವುವು. ಅಥವಾ ಪ್ರತಿಷ್ಠಾಶಬ್ದವನ್ನು ಪ್ರಯೋಗಿಸಿರುವುದು ಪಾದರೂಪಕಕಲ್ಪನೆಯೆಂದು ತಿಳಿದರೆ, 'ವೇದಗಳು ಶಿರವೇ ಮೊದಲಾದ ಉಳಿದ ಅಂಗಗಳು' ಎಂದು ಅರ್ಥಮಾಡಬಹುದು. ಈ ಪಕ್ಷದಲ್ಲಿ ವೇದಗಳನ್ನು ಹೇಳಿದ್ದರಿಂದ ಶಿಕ್ಷೆ ಮೊದಲಾದ ಆರು ಅಂಗಗಳನ್ನೂ ಹೇಳಿದಂತೆ ಆಯಿತೆಂದು ಗ್ರಹಿಸಬೇಕು.

[೮] ವಾಕ್ಕು ಶರೀರ ಮನಸ್ಸು ಇವುಗಳಲ್ಲಿ ಕುಟಿಲತೆಯಿಲ್ಲದಿರುವುದು.]

ಯೋ ವಾ ಏತಾಮೇವಂ ವೇದಾಪಹತ್ಯ ಪಾಪ್ಮಾನಮನಂತೇ
ಸ್ವರ್ಗೇ ಲೋಕೇ ಜ್ಯೇಯೇ ಪ್ರತಿತಿಷ್ಠತಿ ಪ್ರತಿತಿಷ್ಠತಿ ॥ ೯ ॥

ಯಃ ವೈ=ಯಾವನು **ಏತಾಂ**=ಇದನ್ನು **ಏವಂ**=ಹೀಗೆ **ವೇದ**=ತಿಳಿಯುತ್ತಾನೆಯೊ, [ಸಃ=ಅವನು] **ಪಾಪ್ಮಾನಂ**=ಪಾಪವನ್ನು **ಅಪಹತ್ಯ**=ಕಳೆದುಕೊಂಡು **ಅನಂತೇ**=ಅನಂತವಾದ **ಜ್ಯೇಯೇ**=ಸರ್ವಮಹತ್ತಮವಾದ **ಸ್ವರ್ಗೇ ಲೋಕೇ**=ಸ್ವರ್ಗಲೋಕದಲ್ಲಿ **ಪ್ರತಿತಿಷ್ಠತಿ**=ಪ್ರತಿಷ್ಠಿತನಾಗುತ್ತಾನೆ **ಪ್ರತಿತಿಷ್ಠತಿ**=ಪ್ರತಿಷ್ಠಿತನಾಗುತ್ತಾನೆ.

೯. ಯಾವನು ಇದನ್ನು[೧] ಹೀಗೆ ತಿಳಿಯುತ್ತಾನೆಯೊ (ಅವನು) ಪಾಪವನ್ನು[೨] ಕಳೆದುಕೊಂಡು ಅನಂತವೂ ಸರ್ವಮಹತ್ತಮವೂ ಆದ ಸ್ವರ್ಗಲೋಕದಲ್ಲಿ[೩] ಪ್ರತಿಷ್ಠಿತನಾಗುತ್ತಾನೆ,[೪] ಪ್ರತಿಷ್ಠಿತನಾಗುತ್ತಾನೆ.[೫]

[[೧] ಈ ಉಪನಿಷತ್ತಿನ ಮೊದಲಿನಿಂದ ಕೊನೆಯವರೆಗೆ ಹೇಳಿರುವ ಬ್ರಹ್ಮವಿದ್ಯೆಯನ್ನು.

[೨] ಅವಿದ್ಯಾ-ಕಾಮ-ಕರ್ಮವೆಂಬ ಸಂಸಾರಬೀಜವನ್ನು ನಾಶಮಾಡಿಕೊಂಡು.

[೩] ಸುಖಾತ್ಮಕವಾದ ಬ್ರಹ್ಮದಲ್ಲಿ.

[೪] ಸಂಸಾರವನ್ನು ಹೊಂದುವುದಿಲ್ಲ.

[೫] ದ್ವಿರುಕ್ತಿಯು ಉಪನಿಷತ್ತಿನ ಸಮಾಪ್ತಿಯನ್ನು ಸೂಚಿಸುತ್ತದೆ.]

ಶ್ರೀರಂಗರಾಮಾನುಜರ ವ್ಯಾಖ್ಯಾನವನ್ನು ಅನುಸರಿಸಿದ

ತಾತ್ಪರ್ಯಟಿಪ್ಪಣಿಗಳು

ಅತಸೀಗುಚ್ಛಸಚ್ಛಾಯಮಂಚಿತೋರಸ್ಥಲಂ ಶ್ರಿಯಾ ।
ಅಂಜನಾಚಲಶೃಂಗಾರಮಂಜಲಿರ್ಮಮ ಗಾಹತಾಮ್ ॥

ವ್ಯಾಸಂ ಲಕ್ಷ್ಮಣಯೋಗೀಂದ್ರಂ ಪ್ರಣಮ್ಯಾನ್ಯಾನ್ ಗುರೂನಪಿ ।
ವ್ಯಾಖ್ಯಾಂ ತಲವಕಾರೋಪನಿಷದಃ ಕರವಾಣ್ಯಹಮ್ ॥

ಕೇನೋಪನಿಷತ್

ಮೊದಲನೆಯ ಖಂಡ

೧. ಯಾರಿಂದ ಪ್ರೇರಿತವಾಗಿ ಮನಸ್ಸು (ತನ್ನ) ವಿಷಯದಲ್ಲಿ ಪ್ರವರ್ತಿಸುತ್ತದೆ? ಯಾರಿಂದ ಪ್ರೇರಿತವಾಗಿ ಪ್ರಥಮಪ್ರಾಣವು[೧] ಸಂಚರಿಸುತ್ತದೆ? ಯಾರಿಂದ ಪ್ರೇರಿತವಾಗಿ ಈ ಮಾತನ್ನು[೨] (ಜನರು) ಆಡುತ್ತಾರೆ? ಯಾವ ದೇವನು ಕಣ್ಣುಕಿವಿಗಳನ್ನು ಪ್ರೇರಿಸುತ್ತಾನೆ?

[ಪ್ರಶ್ನೋತ್ತರಪ್ರಕಾರದಿಂದ ಪರಮಾತ್ಮಸ್ವರೂಪವನ್ನು ಪ್ರಕಾಶಿಸಲು ಈ ಪ್ರಕರಣವು ಪ್ರಾರಂಭಿಸಲ್ಪಟ್ಟಿದೆ. ಅಚೇತನವಾದ ಪ್ರಾಣೇಂದ್ರಿಯಗಳಿಗೆ ಚೇತನದ ಪ್ರೇರಣೆಯಿಲ್ಲದಿದ್ದರೆ ತಮ್ಮ ಕಾರ್ಯಗಳನ್ನು ಮಾಡಲು ಅಸಾಧ್ಯವಾದುದರಿಂದ ಶಿಷ್ಯನು ಗುರುಗಳನ್ನು ಪ್ರಶ್ನಿಸುತ್ತಾನೆ.

[೧] ಮುಖ್ಯಪ್ರಾಣ.

[೨] ವಾಗಿಂದ್ರಿಯವನ್ನು ಅವಲಂಬಿಸಿಕೊಂಡು.]

೨. (ಗುರು): ಯಾವುದು[೧] ಕಿವಿಗೆ ಕಿವಿಯೊ, ಮನಸ್ಸಿಗೆ ಮನಸ್ಸೊ, ವಾಕ್ಕಿಗೆ ವಾಕ್ಕೊ, ಪ್ರಾಣಕ್ಕೆ ಪ್ರಾಣವೊ, ಕಣ್ಣಿಗೆ ಕಣ್ಣೊ, (ಅದನ್ನು) ಅರಿತುಕೊಂಡು ವಿವೇಕಿಗಳು ಈ ಲೋಕದಿಂದ ಹೋಗಿ[೨] ಅಮೃತರಾಗುತ್ತಾರೆ.

[[೧] ಯಾವುದು ಕಣ್ಣು ಮೊದಲಾದುವುಗಳನ್ನು ಬೆಳಗಿಸುವುದೊ, ಯಾವುದನ್ನು ಕಣ್ಣು ಮೊದಲಾದುವು ಬೆಳಗಿಸಲಾರವೊ ಮತ್ತು ಯಾವುದರ ಪ್ರಾಣನವು ಪ್ರಾಣಕ್ಕೆ ಅಧೀನವಾಗಿಲ್ಲವೊ ಅದೇ.

[೨] ಅರ್ಚಿರಾದಿಮಾರ್ಗದ ಮೂಲಕ.]

೩. ಅಲ್ಲಿಗೆ ಕಣ್ಣು ಹೋಗುವುದಿಲ್ಲ, ವಾಕ್ಕು ಹೋಗುವುದಿಲ್ಲ, ಮನಸ್ಸು ಹೋಗುವುದಿಲ್ಲ; ನಾವು ಅರಿಯೆವು,[೧] ನಾವು ತಿಳಿಯೆವು.[೨] ಹೀಗೆ ಅದನ್ನು ಉಪದೇಶಿಸಬೇಕು.

[[೧] ಅಂತರಿಂದ್ರಿಯದ ಮೂಲಕ.

[೨] ಬಹಿರಿಂದ್ರಿಯದ ಮೂಲಕ.]

೪. ಅದು ತಿಳಿದಿರುವುದಕ್ಕಿಂತ ಬೇರೆ, ತಿಳಿಯದಿರುವುದಕ್ಕಿಂತ ಬೇರೆ; ಯಾರು ನಮಗೆ ಅದನ್ನು ವಿವರಿಸಿದರೊ ಅಂತಹ ಪೂರ್ವಿಕರಾದ ಗುರುಗಳಿಂದ ಹೀಗೆ ಕೇಳಿದ್ದೇವೆ.[೧]

[ಬ್ರಹ್ಮವು ಜ್ಞಾನಕ್ಕೆ ವಿಷಯವೇ ಆಗದಿದ್ದರೆ ಅದು ಶೂನ್ಯವಾಗಿ (ತುಚ್ಛತ್ವಂ ಸ್ಯಾತ್) ಗುರುವಿನ ಬಳಿಗೆ ಹೋಗುವುದು ಮುಂತಾದುವು ಅಸಂಭವವಾಗುವುದಿಲ್ಲವೆ? ಇಂತಹ ಸಂದೇಹವುಂಟಾದರೆ ಈ ಮಂತ್ರವೇ ಉತ್ತರವನ್ನು ಕೊಟ್ಟಿದೆ.

[೧] ಅವರು ಸರ್ವಾತ್ಮನಾ ತಿಳಿದಿರುವುದಕ್ಕಿಂತ ವಿಲಕ್ಷಣವು ಮತ್ತು ಅವರು ಸರ್ವಾತ್ಮನಾ ತಿಳಿಯದಿರುವುದಕ್ಕಿಂತ ವಿಲಕ್ಷಣವು; ಬ್ರಹ್ಮವು ಈ ಲಕ್ಷಣವುಳ್ಳದ್ದು.]

೫. ಯಾವುದು ವಾಕ್ಕಿನಿಂದ ಪ್ರಕಾಶಿಸಲ್ಪಡುವುದಿಲ್ಲವೊ, ಯಾವುದರಿಂದ ವಾಕ್ಕು ಪ್ರಕಾಶಿಸುವುದೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಅದಲ್ಲ.[೧]

[[೧] ಅಂಗೈಯಲ್ಲಿರುವ ನೆಲ್ಲಿಕಾಯಿಯ ಹಾಗೆ ಜನರು ಯಾವುದನ್ನು 'ಇದು' ಎಂದು ತಮಗೆ ತಿಳಿದಿರುವಂತೆ ಉಪಾಸಿಸುತ್ತಾರೆಯೊ ಅದು ಬ್ರಹ್ಮವಲ್ಲ.]

೬. ಯಾವುದನ್ನು ಮನಸ್ಸಿನಿಂದ ಮನನಮಾಡಲು ಆಗುವುದಿಲ್ಲವೊ, ಯಾವುದರಿಂದ ಮನಸ್ಸು ಮನನಮಾಡಲ್ಪಟ್ಟಿದೆಯೆಂದು ಹೇಳುವರೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆ ಮಾಡುತ್ತಾರೆಯೊ ಅದಲ್ಲ.

೭. ಯಾವುದನ್ನು ಕಣ್ಣಿನಿಂದ ನೋಡುವುದಿಲ್ಲವೊ, ಯಾವುದರಿಂದ ಕಣ್ಣುಗಳು ನೋಡುತ್ತವೆಯೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಅದಲ್ಲ.

೮. ಯಾವುದನ್ನು ಕಿವಿಯಿಂದ ಕೇಳುವುದಿಲ್ಲವೊ, ಯಾವುದರಿಂದ ಕಿವಿಯು ಕೇಳಲ್ಪಡುವುದೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಅದಲ್ಲ.

೯. ಯಾವುದು ಪ್ರಾಣದಿಂದ ಬದುಕುವುದಿಲ್ಲವೊ, ಯಾವುದರಿಂದ ಪ್ರಾಣವು ಬದುಕುವಂತೆ ಆಗುತ್ತದೆಯೊ ಅದನ್ನೇ ನೀನು ಬ್ರಹ್ಮವೆಂದು ತಿಳಿ; ಯಾವುದನ್ನು 'ಇದು' ಎಂದು (ಜನರು) ಉಪಾಸನೆಮಾಡುತ್ತಾರೆಯೊ ಅದಲ್ಲ.

ಎರಡನೆಯ ಖಂಡ

೧. (ಗುರು): '(ಅದನ್ನು) ನಾನು ಚೆನ್ನಾಗಿ ತಿಳಿದಿರುತ್ತೇನೆ' ಎಂದು ನೀನು ಅರಿತಿದ್ದರೆ, ಈ ಬ್ರಹ್ಮದ ಯಾವ ರೂಪವನ್ನು ನೀನು ತಿಳಿದಿರುತ್ತೀಯೊ[೧] ಮತ್ತು ಇದರ ಯಾವ (ರೂಪವನ್ನು) ದೇವತೆಗಳಲ್ಲಿ (ತಿಳಿದಿರುತ್ತೀಯೊ ಅವು) ಅಲ್ಪವೇ.[೨] ಆದುದರಿಂದ ಅದು ಇನ್ನೂ ವಿಚಾರಮಾಡಲ್ಪಡತಕ್ಕದ್ದು.

(ಶಿಷ್ಯ): '(ಅದು) ನನಗೆ ತಿಳಿಯಿತು'[೩] ಎಂದು ಎಣಿಸುತ್ತೇನೆ.

[ಗುರು ಶಿಷ್ಯನಿಗೆ ಹೇಳುತ್ತಾನೆ: 'ನನಗೆ ಬ್ರಹ್ಮಸ್ವರೂಪವು ಚೆನ್ನಾಗಿ ತಿಳಿದಿದೆ' ಎಂದು ನೀನು ಭಾವಿಸಿಕೊಂಡಿದ್ದರೆ ಅದು ತಪ್ಪು.

[೧] ಈ ಲೋಕದಲ್ಲಿ.

[೨] ಬ್ರಹ್ಮದ ಎಲ್ಲ ರೂಪವು ನಿನಗೆ ತಿಳಿದಿಲ್ಲ.

[೩] ಗುರುವಿನ ಮಾತನ್ನು ಕೇಳಿದಮೇಲೆ ಶಿಷ್ಯನು ಚೆನ್ನಾಗಿ ವಿಚಾರಮಾಡಿ ಕೊಟ್ಟ ಉತ್ತರ.]

೨. ನಾನು (ಅದನ್ನು) ಚೆನ್ನಾಗಿ ತಿಳಿದಿರುತ್ತೇನೆಂದು ಎಣಿಸಿರುವುದಿಲ್ಲ, ತಿಳಿದುಕೊಂಡಿಲ್ಲವೆಂದೂ ಎಣಿಸಿರುವುದಿಲ್ಲ, ತಿಳಿದೂ ಇದ್ದೇನೆ.[೧] 'ತಿಳಿದುಕೊಂಡಿಲ್ಲವೆಂದೂ ಎಣಿಸಿರುವುದಿಲ್ಲ, ತಿಳಿದೂ ಇರುತ್ತೇನೆ' ಎಂಬುದನ್ನು ನಮ್ಮಲ್ಲಿ[೨] ಯಾವನು ಅರಿತಿರುತ್ತಾನೆಯೊ (ಅವನೇ) ಅದನ್ನು ಅರಿತಿರುತ್ತಾನೆ.

[[೧] 'ನನಗೆ ಸಂಪೂರ್ಣವಾಗಿ ತಿಳಿಯದಿದ್ದರೂ ಸ್ವಲ್ಪ ತಿಳಿದಿದೆ' ಎಂದು ಅರ್ಥ.

[೨] ಬ್ರಹ್ಮಚಾರಿಗಳಲ್ಲಿ.]

೩. ಯಾವನಿಗೆ (ಅದರ) ಕಲ್ಪನೆಯಿಲ್ಲವೊ ಅವನಿಗೆ ತಿಳಿದಿದೆ;[೧] ಯಾವನಿಗೆ (ಅದರ) ಕಲ್ಪನೆಯಿದೆಯೊ ಅವನಿಗೆ ತಿಳಿದಿಲ್ಲ.[೨] ತಿಳಿದವರಿಗೆ[೩] ತಿಳಿಯದೆ ಇರುತ್ತದೆ, ತಿಳಿಯದವರಿಗೆ[೪] ತಿಳಿದಿರುತ್ತದೆ.

[[೧] ಯಾವನು ಬ್ರಹ್ಮವು ಪರಿಚ್ಛೇದ್ಯವೆಂದು ತಿಳಿದಿಲ್ಲವೊ ಅವನಿಗೆ ತಿಳಿದಿದೆ.

[೨] ಯಾವನು ಬ್ರಹ್ಮವು ಪರಿಚ್ಛೇದ್ಯವೆಂದು ತಿಳಿದಿರುತ್ತಾನೆಯೊ ಅವನಿಗೆ ತಿಳಿದಿಲ್ಲ.

[೩] ಯಾರಿಗೆ ಬ್ರಹ್ಮವು 'ಇಷ್ಟೆ' ಎಂಬ ಪರಿಚ್ಛೇದಜ್ಞಾನವಿದೆಯೊ ಅವರಿಗೆ ತಿಳಿದಿಲ್ಲ.

[೪] ಯಾರಿಗೆ ಬ್ರಹ್ಮವು 'ಇಷ್ಟೆ' ಎಂಬ ಪರಿಚ್ಛೇದಜ್ಞಾನವಿಲ್ಲವೊ ಅವರಿಗೆ ತಿಳಿದಿದೆ.

ಬ್ರಹ್ಮವು 'ಅವಿಜ್ಞಾತವು' ಎಂದರೆ ನಮ್ಮ ಜ್ಞಾನಕ್ಕೆ ಸಂಪೂರ್ಣ ವಿಷಯವಲ್ಲ ಎಂದು ಅರ್ಥ; ನಮ್ಮ ಜ್ಞಾನಕ್ಕೆ ಅದು ಗೋಚರವಾಗುವುದೇ ಇಲ್ಲ, ಎಂದು

ತಿಳಿಯಕೂಡದು. ಹಾಗೆ ತಿಳಿದುಕೊಂಡರೆ 'ಬ್ರಹವಿದಾಪ್ನೋತಿ ಪರಂ', 'ತಮೇವ ವಿದಿತ್ವಾತಿ ಮೃತ್ಯುಮೇತಿ' ಎಂಬ ಶ್ರುತಿವಾಕ್ಯಗಳ ಅರ್ಥವು ಅಸಂಬದ್ಧವಾಗುವುದು.]

೪. ವಿಶಿಷ್ಟಜ್ಞಾನದಿಂದ[೧] ತಿಳಿಯಲ್ಪಟ್ಟ ಮತ್ತು ಮನನಮಾಡಲ್ಪಟ್ಟ (ಬ್ರಹ್ಮವು), (ಉಪಾಸಕನಿಗೆ) ಅಮೃತತ್ವವನ್ನು ಹೊಂದಿಸುತ್ತದೆ.[೨] ಆತ್ಮನಿಂದ (ಉಪಾಸಕನು) ವೀರ್ಯವನ್ನು[೩] ಹೊಂದುತ್ತಾನೆ ಮತ್ತು ವಿದ್ಯೆಯಿಂದ ಅಮೃತವನ್ನು ಹೊಂದುತ್ತಾನೆ.[೪]

[[೧] ಪ್ರತಿಬೋಧವೆಂದರೆ ವಸ್ತುವನ್ನು ಅದರ ಅಸಾಧಾರಣ ಧರ್ಮಗಳಿಂದ ವಿಶಿಷ್ಟವಾದಂತೆ ತಿಳಿಯುವುದು. ಸತ್ಯತ್ವ ಜ್ಞಾನತ್ವ ಅನಂತತ್ವ ಮೊದಲಾದುವು ಬ್ರಹ್ಮದ ಅಸಾಧಾರಣ ಧರ್ಮಗಳು; ಈ ಧರ್ಮಗಳಿಂದ ವಿಶಿಷ್ಟವಾದಂತೆ ಬ್ರಹ್ಮವು ತಿಳಿಯಲ್ಪಟ್ಟರೆ, ಅದು ಉಪಾಸಕನ ಮೋಕ್ಷಕ್ಕೆ ಕಾರಣವಾಗುವುದು.

[೨] ವಿಂದತೇ = ಲಂಭಯತಿ; ಇಲ್ಲಿ 'ವಿದ್' ಧಾತುವು ಪ್ರೇರಣಾರ್ಥಕ.

[೩] ಪ್ರಸನ್ನನಾದ ಪರಮಾತ್ಮನಿಂದ ವಿದ್ಯಾನಿಷ್ಪತ್ತಿಗೆ ಅನುಕೂಲವಾದ ವೀರ್ಯವನ್ನು ಪಡೆಯುತ್ತಾನೆ.

[೪] ಪರಮಾತ್ಮನು ಅನುಗ್ರಹಿಸಿದ ವೀರ್ಯದ ಮೂಲಕ ಉಂಟಾದ ಜ್ಞಾನದಿಂದ ಅಮೃತತ್ವವನ್ನು ಹೊಂದುತ್ತಾನೆ ಎಂದರ್ಥ.]

೫. ಇಲ್ಲಿ (ಬ್ರಹ್ಮವನ್ನು) ತಿಳಿದುಕೊಂಡರೆ, (ಹಾಗೆ ತಿಳಿಯುವವನು) ಆಗ ಸತ್ಯವಾಗಿ ಇರುವವನಾಗುತ್ತಾನೆ. ಇಲ್ಲಿ (ಅದನ್ನು) ತಿಳಿದುಕೊಳ್ಳದಿದ್ದರೆ ದೊಡ್ಡ ವಿನಾಶವಾಗುತ್ತದೆ.[೧] ಜ್ಞಾನಿಗಳು ಸರ್ವಪ್ರಾಣಿಗಳಲ್ಲಿಯೂ ಅದನ್ನು ನಿರ್ಧರಿಸಿ[೨] ಈ ಲೋಕದಿಂದ ಹೋಗಿ[೩] ಅಮೃತರಾಗುತ್ತಾರೆ.

[[೧] ಈ ಜನ್ಮದಲ್ಲಿಯೇ ಬ್ರಹ್ಮವನ್ನು ತಿಳಿದುಕೊಂಡವನು ವಸ್ತುತಃ ಇದ್ದಂತೆ. ಇಂತಹ ಜ್ಞಾನವಿಲ್ಲದಿದ್ದರೆ ಆತ್ಮನಿಗೆ ಅಸ್ತಿತ್ವವು ಸತ್ಯವಾಗಿ ಇರುವುದಿಲ್ಲ. ಈ ಕಾರಣದಿಂದಲೇ ಈಶಾವಾಸ್ಯವು ಬ್ರಹ್ಮಪ್ರಾಪ್ತಿಯನ್ನು 'ಸಂಭೂತಿ' ಎಂದು ಹೇಳಿರುತ್ತದೆ. ತೈತ್ತಿರೀಯದಲ್ಲಿ (೨, ೬) ಈ ಅರ್ಥವು ಇನ್ನೂ ಸ್ಫುಟವಾಗಿ ಬಂದಿದೆ: 'ಬ್ರಹ್ಮವು ಅಸತ್ತು ಎಂದು ತಿಳಿದುಕೊಂಡರೆ, ಹಾಗೆ ತಿಳಿಯುವವನು ಅಸತ್ತಾಗಿಯೇ ಆಗುತ್ತಾನೆ. ಬ್ರಹ್ಮವು ಇದೆ ಎಂದು ತಿಳಿದುಕೊಂಡರೆ, ಹಾಗೆ ತಿಳಿದುಕೊಂಡವನನ್ನು ಆ ಕಾರಣದಿಂದ 'ಸನ್' ಎಂದು (ಜ್ಞಾನಿಗಳು) ತಿಳಿಯುವರು.'

[೨] ಸರ್ವಪ್ರಾಣಿಗಳಲ್ಲಿಯೂ ಇರುವ ಪರಮಾತ್ಮನು ಎಲ್ಲಕ್ಕಿಂತಲೂ ವಿಲಕ್ಷಣನೆಂದು ನಿರ್ಧರಿಸಿ.

[೩] ಅರ್ಚಿರಾದಿಮಾರ್ಗದಿಂದ.

[೪] ಮುಕ್ತರಾಗುತ್ತಾರೆ.]

ಮೂರನೆಯ ಖಂಡ

೧. ಬ್ರಹ್ಮವು ದೇವತೆಗಳಿಗಾಗಿ ಜಯಿಸಿತು.[೧] ಆ ಬ್ರಹ್ಮದ ಜಯದಲ್ಲಿ ದೇವತೆಗಳು ಮಹಿಮಾನ್ವಿತರಾದರು. 'ಈ ಜಯವು ನಮ್ಮದೇ, ಈ ಮಹಿಮೆಯು ನಮ್ಮದೇ' ಎಂದು ಅವರು ಯೋಚನೆಮಾಡಿದರು.

['ಆತ್ಮನಿಂದ ವೀರ್ಯವನ್ನು ಹೊಂದುತ್ತಾನೆ' (೨, ೪) ಎಂದು ಹಿಂದೆ ಹೇಳಿದ ವಿಷಯದಲ್ಲಿ ಈ ಆಖ್ಯಾಯಿಕೆಯನ್ನು ಹೇಳಿದೆ.

[೧] ಪರಮಾತ್ಮನು ದೇವತೆಗಳ ಅನುಗ್ರಹಕ್ಕಾಗಿ ಅಸುರರೇ ಮೊದಲಾದ ಶತ್ರುಗಳನ್ನು ಜಯಿಸಿದನು.]

೨. ಅದು ಇವರ (ಅಭಿಮಾನವನ್ನು) ತಿಳಿದುಕೊಂಡಿತು; ಅವರಿಗೆ ಕಾಣಿಸಿಕೊಂಡಿತು. ಈ ಯಕ್ಷವು ಯಾವುದೆಂಬುದನ್ನು ಅವರು ತಿಳಿಯಲಿಲ್ಲ.

೩. ಅವರು ಅಗ್ನಿಯನ್ನು ಕುರಿತು 'ಹೇ ಜಾತವೇದ, ಈ ಯಕ್ಷವು ಯಾವುದೆಂಬುದನ್ನು ತಿಳಿದುಕೊ' ಎಂದು ಹೇಳಿದರು. 'ಹಾಗೆಯೇ ಆಗಲಿ' ಎಂದು (ಅಗ್ನಿಯು ಹೇಳಿದನು).

೪. (ಅಗ್ನಿಯು) ಅದರ ಸಮೀಪಕ್ಕೆ ಓಡಿದನು. 'ನೀನು ಯಾರು?' ಎಂದು ಅವನನ್ನು (ಯಕ್ಷವು) ಪ್ರಶ್ನಿಸಿತು. 'ನಾನು ಅಗ್ನಿಯೇ ಆಗಿರುವೆನು, ಜಾತವೇದನೇ ಆಗಿರುವೆನು' ಎಂದು ಹೇಳಿದನು.

೫. 'ಅಂತಹ ನಿನ್ನಲ್ಲಿ ಯಾವ ವೀರ್ಯವುಂಟು?'[೧] ಎಂದು (ಯಕ್ಷವು ಪ್ರಶ್ನಿಸಲು), (ಅಗ್ನಿಯು) 'ಈ ಭೂಮಿಯಲ್ಲಿ ಏನೇನಿದೆಯೊ ಇದೆಲ್ಲವನ್ನೂ ಸುಡಬಲ್ಲೆನು' ಎಂದು ಹೇಳಿದನು.

[[೧] ಸಾಮರ್ಥ್ಯವುಂಟು?]

೬. 'ಇದನ್ನು ಸುಡು' ಎಂದು ಅವನ ಎದುರಿಗೆ (ಒಂದು) ಹುಲ್ಲು ಕಡ್ಡಿಯನ್ನು (ಯಕ್ಷವು) ಇಟ್ಟಿತು. (ಅಗ್ನಿಯು) ಸರ್ವವೇಗದಿಂದಲೂ ಅದರ ಬಳಿಗೆ ಓಡಿದನು. ಅದನ್ನು ಸುಡಲು ಶಕ್ತನಾಗಲಿಲ್ಲ. ಅವನು ಅಲ್ಲಿಂದಲೇ ಹಿಂತಿರುಗಿದನು. 'ಇದು ಯಾವ ಯಕ್ಷವು ಎಂಬುದನ್ನು ತಿಳಿಯಲು ಶಕ್ತನಾಗಲಿಲ್ಲ' (ಎಂದು ದೇವತೆಗಳಿಗೆ ಹೇಳಿದನು).

೭. ಅನಂತರ ವಾಯುವನ್ನು ಕುರಿತು 'ಹೇ ವಾಯು, ಈ ಯಕ್ಷವು ಯಾವುದೆಂಬುದನ್ನು ತಿಳಿದುಕೊ' ಎಂದು ಹೇಳಿದರು. 'ಹಾಗೆಯೇ ಆಗಲಿ' ಎಂದು (ವಾಯುವು ಹೇಳಿದನು).

೮. ವಾಯುವು ಅದರ ಸಮೀಪಕ್ಕೆ ಓಡಿದನು. 'ನೀನು ಯಾರು?' ಎಂದು ಅವನನ್ನು (ಯಕ್ಷವು) ಪ್ರಶ್ನಿಸಿತು. 'ನಾನು ವಾಯುವೇ ಆಗಿರುವೆನು, ಮಾತರಿಶ್ವನೇ ಆಗಿರುವೆನು' ಎಂದು ಹೇಳಿದನು.

೯. 'ಅಂತಹ ನಿನ್ನಲ್ಲಿ ಯಾವ ವೀರ್ಯವುಂಟು?' ಎಂದು (ಯಕ್ಷವು ಪ್ರಶ್ನಿಸಲು), (ವಾಯುವು) 'ಈ ಭೂಮಿಯಲ್ಲಿ ಏನೇನಿದೆಯೊ ಇದೆಲ್ಲವನ್ನೂ ಎತ್ತಬಲ್ಲೆನು' ಎಂದು ಹೇಳಿದನು.

೧೦. 'ಇದನ್ನು ಎತ್ತು' ಎಂದು ಅವನ ಎದುರಿಗೆ (ಒಂದು) ಹುಲ್ಲು ಕಡ್ಡಿಯನ್ನು (ಯಕ್ಷವು) ಇಟ್ಟಿತು. (ವಾಯುವು) ಸರ್ವವೇಗದಿಂದಲೂ ಅದರ ಬಳಿಗೆ ಓಡಿದನು. ಅದನ್ನು ಎತ್ತಲು ಶಕ್ತನಾಗಲಿಲ್ಲ. ಅವನು ಅಲ್ಲಿಂದಲೇ ಹಿಂತಿರುಗಿದನು. 'ಇದು ಯಾವ ಯಕ್ಷವು ಎಂಬುದನ್ನು ತಿಳಿಯಲು ಶಕ್ತನಾಗಲಿಲ್ಲ' ಎಂದು ದೇವತೆಗಳಿಗೆ ಹೇಳಿದನು.

೧೧. ಅನಂತರ ಇಂದ್ರನನ್ನು ಕುರಿತು 'ಹೇ ಮಘವಂತ, ಈ ಯಕ್ಷವು ಯಾವುದೆಂಬುದನ್ನು ತಿಳಿದುಕೊ' ಎಂದು ಹೇಳಿದರು. 'ಹಾಗೆಯೇ ಆಗಲಿ' ಎಂದು (ಇಂದ್ರನು ಹೇಳಿದನು). ಇಂದ್ರನು ಅದರ ಸಮೀಪಕ್ಕೆ ಓಡಿದನು. ಅದು ಅವನಿಂದ[೧] ಮರೆಯಾಯಿತು.[೨]

[[೧] ಇಂದ್ರನ ಸನ್ನಿಧಿಯಿಂದ.
[೨] ಇಂದ್ರನ ಗರ್ವಭಂಗವಾಗದಿರಲೆಂದು.]

೧೨. ಅವನು ಆ ಆಕಾಶದಲ್ಲಿಯೇ (ಇದ್ದ) ಬಹುಶೋಭಮಾನಳೂ ಉಮಾ ಹೈಮವತಿಯೂ ಆದ ಒಬ್ಬ ಸ್ತ್ರೀಯ ಸಮೀಪಕ್ಕೆ ಬಂದನು. 'ಈ ಯಕ್ಷವು ಯಾವುದು?' ಎಂದು ಅವಳನ್ನು ಕೇಳಿದನು.

[ಆ ಪ್ರದೇಶದಲ್ಲಿಯೇ, ಹಿಮವಂತನ ಮಗಳೂ, ಅನೇಕ ಆಭರಣಗಳಿಂದ ಶೋಭಮಾನಳೂ, ತನ್ನ ಅನುಗ್ರಹಕ್ಕಾಗಿ ಕಾಣಿಸಿಕೊಂಡವಳೂ ಆದ ಪಾರ್ವತಿಯನ್ನು ನೋಡಿ ಇಂದ್ರನು ಅವಳ ಸಮೀಪಕ್ಕೆ ಬಂದನು; ಇವಳು ಎಲ್ಲವನ್ನೂ ತಿಳಿದುಕೊಂಡಿರುವಳೆಂದು ಭಾವಿಸಿ ಅವಳನ್ನು ಪ್ರಶ್ನಿಸಿದನು.]

ನಾಲ್ಕನೆಯ ಖಂಡ

೧. ಉಮೆಯು ಹೇಳಿದಳು: '(ಅದು) ಬ್ರಹ್ಮ;[೧] ಬ್ರಹ್ಮದ ಜಯದಲ್ಲಿಯೇ ಹೀಗೆ ಮಹಿಮೆಯನ್ನು ಹೊಂದಿದಿರಿ.'[೨] ಅದರಿಂದಲೇ[೩] (ಇಂದ್ರನು) ಅದು ಬ್ರಹ್ಮವೆಂದು ತಿಳಿದುಕೊಂಡನು.

[[೧] ಬ್ರಹ್ಮವೇ ಯಕ್ಷರೂಪದಿಂದ ನಿಮ್ಮ ಮೋಹಶಮನಕ್ಕೆ ಪ್ರತ್ಯಕ್ಷವಾಗಿತ್ತು.
[೨] 'ನಾವೇ ಜಯವನ್ನು ಹೊಂದಿದೆವು' ಎಂಬ ದುರಭಿಮಾನವನ್ನು ಬಿಡಿ.
[೩] ಅವಳ ಉಪದೇಶದಿಂದಲೇ.]

೨. ಆದುದರಿಂದ ಅಗ್ನಿ ವಾಯು ಇಂದ್ರ ಎಂಬ ಈ ದೇವತೆಗಳು ಇತರ ದೇವತೆಗಳನ್ನು ಮೀರಿಯೇ ಇರುತ್ತಾರೆ; ಏಕೆಂದರೆ ಅವರು ಹತ್ತಿರದಲ್ಲಿದ್ದ ಇದನ್ನು ಮುಟ್ಟಿದರು[೧] ಮತ್ತು ಇದು ಬ್ರಹ್ಮವೆಂದು ಮೊದಲು ತಿಳಿದುಕೊಂಡರು.

[[೧] ನೋಡಿದರು.]

೩. ಆದುದರಿಂದ ಇಂದ್ರನು ಇತರ ದೇವತೆಗಳನ್ನು ಮೀರಿಯೇ ಇರುತ್ತಾನೆ. ಏಕೆಂದರೆ ಅವನು ಹತ್ತಿರದಲ್ಲಿದ್ದ ಇದನ್ನು ನೋಡಿದನು ಮತ್ತು ಇದು ಬ್ರಹ್ಮವೆಂದು ಮೊದಲು ತಿಳಿದುಕೊಂಡನು.

೪. ಅದರ[೧] ವಿಷಯದಲ್ಲಿ ಈ ಆದೇಶವುಂಟು:[೨] 'ಮಿಂಚು ಹೊಳೆದು ಮಾಯವಾಗುವಂತೆ'.[೩] ಇದು ಅಧಿದೈವತ.[೪]

[[೧] ಪ್ರತ್ಯಕ್ಷವಾಗಿ ಮರೆಯಾದ ಬ್ರಹ್ಮದ.
[೨] ಉಪಮಾನೋಪದೇಶ.
[೩] ಮಿಂಚಿನ ಬಳ್ಳಿ ಒಂದೇ ಕ್ಷಣದಲ್ಲಿ ಹೊಳೆದು ಮಾಯವಾಗುವಂತೆ ಬ್ರಹ್ಮವೂ ಕ್ಷಿಪ್ರವಾಗಿ ತೋರಿಸಿಕೊಂಡು ಮರೆಯಾಯಿತು ಎಂದು ಅರ್ಥ.
[೪] ಅನಾತ್ಮಭೂತವಾದ ಆಕಾಶಾದಿಗಳಲ್ಲಿರುವ ಮಿಂಚನ್ನು ಬ್ರಹ್ಮಕ್ಕೆ ಹೋಲಿಸಿ ಈ ಉಪದೇಶವನ್ನು ಕೊಟ್ಟಿದ್ದಾಯಿತು.]

೫. ಈಗ ಅಧ್ಯಾತ್ಮ:[೧] 'ಮನಸ್ಸು ಈ (ಬ್ರಹ್ಮದ) ಬಳಿಗೆ ಹೋಗುವಂತಿದ್ದರೂ ಸಂಕಲ್ಪವು ಇದನ್ನು ದೀರ್ಘಕಾಲ ಸ್ಮರಿಸುವುದಿಲ್ಲ.'[೨]

[[೧] ದೇಹದಲ್ಲಿರುವ ದೃಷ್ಟಾಂತ.

[2] ಈ ಭಾಷ್ಯಕಾರರು ಅನುಸರಿಸಿರುವ ಉಪನಿಷತ್ ಪಾಠವು ಇತರ ಪಾಠಗಳಿಗಿಂತ ಅತ್ಯಂತ ಭಿನ್ನವಾಗಿದೆ: 'ಅನೇನ ಚೈತದುಪಸ್ಮರತ್ಯಭೀಕ್ಷ್ಣಂ' ಎಂಬಲ್ಲಿ 'ನ ಚೈತದುಪಸ್ಮರತ್ಯಭೀಕ್ಷ್ಣಂ' ಎಂದು ತೆಗೆದುಕೊಂಡಿದ್ದಾರೆ. ಸಂಕಲ್ಪವೆಂದರೆ ಮನೋಜನಿತವಾದ ಧ್ಯಾನವಿಶೇಷ; ಮನಸ್ಸಿನಿಂದ ಬ್ರಹ್ಮವನ್ನು ದೀರ್ಘಕಾಲ ವಿಷಯೀಕರಿಸಲು ಹೇಗೆ ಆಗುವುದಿಲ್ಲವೊ ಹಾಗೆಯೇ ಯಕ್ಷದ ಪ್ರಾದುರ್ಭಾವವು ಕ್ಷಣಿಕವಾಗಿತ್ತೆಂದು ಅರ್ಥ. ಈ ದೃಷ್ಟಾಂತದಿಂದ ನಿರಂತರವಾದ ಬ್ರಹ್ಮಧ್ಯಾನವು ಅಶಕ್ಯವೆಂದು ತಿಳಿದುಕೊಳ್ಳಬಹುದು.]

೬. ಅದಕ್ಕೆ 'ವನ'[1] ಎಂದು ಹೆಸರು. ಅದನ್ನು ವನವೆಂದು ಉಪಾಸಿಸಬೇಕು. ಯಾವನು ಇದನ್ನು ಹೀಗೆಂದು ತಿಳಿಯುವನೊ ಅವನನ್ನು ಎಲ್ಲ ಪ್ರಾಣಿಗಳೂ ಇಚ್ಛಿಸುವುವು.[2]

[[1] ಇಂಥ ಮಹಿಮೆಯಿಂದ ಕೂಡಿದ ಬ್ರಹ್ಮವನ್ನು ಎಲ್ಲರೂ ಇಚ್ಛಿಸುವುದರಿಂದ (ವನನೀಯತ್ವೇನ ಪ್ರಾರ್ಥನೀಯತ್ವೇನ) ವನವೆಂಬ ಹೆಸರನ್ನು ಹೊಂದಿದೆ. ಆದುದರಿಂದ ಅದನ್ನು ವನವೆಂದು ಉಪಾಸಿಸಬೇಕು.

[2] ಉಪಾಸನೆಯ ಫಲ.]

೭. (ಶಿಷ್ಯ): 'ಸ್ವಾಮಿ, ಉಪನಿಷತ್ತನ್ನು ಉಪದೇಶಿಸಿರಿ;'

(ಗುರು): 'ನಿನಗೆ ಉಪನಿಷತ್ತು ಹೇಳಲ್ಪಟ್ಟಿತು. ಬ್ರಾಹ್ಮೀ ಉಪನಿಷತ್ತನ್ನೇ ನಿನಗೆ ಹೇಳಿರುತ್ತೇವೆ.'[1]

[[1] ಬ್ರಹ್ಮವನ್ನು ಪ್ರತಿಪಾದಿಸುವ ಪ್ರಧಾನವಾದ ಉಪನಿಷತ್ತನ್ನು ನಿನಗೆ ಆಗಲೇ ಹೇಳಿದ್ದಾಯಿತು. ಬ್ರಹ್ಮವಿದ್ಯೆಯ ಸಾಧನಗಳನ್ನು ಪ್ರತಿಪಾದಿಸುವ ಉಪನಿಷತ್ತನ್ನು ನೀನು ಕೇಳಬೇಕೆಂದಿದ್ದರೆ ಅದನ್ನು ಉಪದೇಶಿಸುತ್ತೇನೆ.]

೮. ತಪಸ್ಸು ದಮ ಕರ್ಮ ಎಂಬ ಇವು ಅದಕ್ಕೆ ಪ್ರತಿಷ್ಠೆ.[1] ವೇದಗಳು, ಅದರ (ಎಲ್ಲ) ಅಂಗಗಳು, ಸತ್ಯ—ಇವು (ಅದರ) ಆಯತನ.[2]

[[1] ತಪಸ್ಸು (ಶರೀರಶೋಷಣೆ), ದಮ (ಇಂದ್ರಿಯನಿಗ್ರಹ), ಅಗ್ನಿಹೋತ್ರಾದಿ ನಿತ್ಯನೈಮಿತ್ತಿಕ ಕರ್ಮಗಳು–ಇವು ಉಪನಿಷಚ್ಛಬ್ದದಿಂದ ಹೇಳಲ್ಪಟ್ಟ ಬ್ರಹ್ಮವಿದ್ಯೆಯಲ್ಲಿ ಪ್ರತಿಷ್ಠೆಯನ್ನು ಹೊಂದಲು ಸಾಧನಗಳು.

[2] ಎಲ್ಲ ಅಂಗಗಳಿಂದ ಕೂಡಿದ ವೇದಗಳು ಮತ್ತು ಸತ್ಯವಚನ ಇವು ಬ್ರಹ್ಮವಿದ್ಯೋತ್ಪತ್ತಿಗೆ ಕಾರಣ.]

೯. ಯಾವನು ಇದನ್ನು[೧] ಹೀಗೆ ತಿಳಿಯುತ್ತಾನೆಯೊ (ಅವನು) ಪಾಪವನ್ನು ಕಳೆದುಕೊಂಡು ಅನಂತವೂ ಸರ್ವಮಹತ್ತಮವೂ ಆದ ಸ್ವರ್ಗ ಲೋಕದಲ್ಲಿ[೨] ಪ್ರತಿಷ್ಠಿತನಾಗುತ್ತಾನೆ, ಪ್ರತಿಷ್ಠಿತನಾಗುತ್ತಾನೆ.

[[೧] ಹಿಂದೆ ಹೇಳಿದ ಪ್ರತಿಷ್ಠಾಯತನಗಳಿಂದ ಕೂಡಿದ ಬ್ರಹ್ಮವಿದ್ಯೆಯನ್ನು ಯಾವನು ತಿಳಿಯುತ್ತಾನೆಯೊ ಅವನು ಸರ್ವಪಾಪಗಳನ್ನು ಕಳೆದುಕೊಂಡು ಕಾಲಪರಿಚ್ಛೇದ ವಿಲ್ಲದ ವೈಕುಂಠದಲ್ಲಿ ನೆಲಸುತ್ತಾನೆ.

[೨] 'ಅನಂತ, ಜ್ಯೇಯ' ಎಂಬ ಪದಗಳನ್ನು ಉಪಯೋಗಿಸಿರುವುದರಿಂದ ಸ್ವರ್ಗ ಲೋಕಶಬ್ದವು ಭಗವಲ್ಲೋಕವನ್ನು ಸೂಚಿಸುತ್ತದೆ.]

ರೂ. 0·50